Regarding the recognition, I cannot understand why it should be such a great fuss. When a procedure is laid down in the Department, why should anybody interfere with the law? Because today every Lobour Officer should keep his telephone even near his bedside to receive calls at odd hours. Sir, I shall tell you a strange affair. The Hon'ble Minister for Labour—he also comes from labour ranks. For some time, he was President of the K.R.S. Mill Union. In that way, he became Municipal President, then MLA and then Minister also. After becoming Minister, he has held various portfolios. He has held the portfolio of Co-operative Department, Health Department, Municipal Administration Department; at long last, he is given the portfolio of Labour and Law. He must be aware that a number of workers in the K. R. Mill were getting Rs. 120 as D A. It was reduced. The matter went to High Court. It came back and again the D.A. was increased. Now there is a demand for increased D.A. and without getting the parties together for conciliation, there is force applied and they say that the Unions should accept the settlement arrived at by one of the Unions and the Minister. The matter was referred to the Tribunal. I think the matter is still pending and I understand that even the Tribunal has been asked to give long adjournments. This is how the

affairs of labour are going on. Probably he feels that he must only pull on from one election to another and the Managements may just help him at the time of elections. If that is to go on in Labour Department, then you may not call it as Labour Department, you may call it as the Department of Management, where everybody can sing, dance and run about merrily. What can the poor labourers get from such a Department? The political principle of "divide and rule" is ruling in this Department. If a Union is supported by a Congressman, that Union is recognised. There is no law. There is a department where nothing has been done to help the labourer. Every suggestion has been brushed aside, because matters are not decided on merits. Things are looked at only from the point of view, whether any approach is made by the sympathiser of the Minister or by a member of the Opposition. That is how, unfortunately our labour problems have gone from bad to worse. In this particular State, no single legislation for the welfare of labour has been brought in. Labour Housing is there... . ...

Mr. SPEAKER.—The hon. Member's time is up.

Sri AZEEZ SAIT.—I am finishing Sir. About labour amenities like the Canteen, etc. There are several canteens where poor labourers after hard work, they have to sit, eat and take rest. There are no dining facilities provided for workers even after 22 years of Congress rule in many of the factories. No arrangement has been made for women workers to take care of their children while they are attending to work in factories. These are some of the welfare measures which the Department ought to bring about. They should not stand on formalities. The officials in that Department must have some social outlook and not wait till the labourers agitate for every small matter.

About the E S I, I should say that it is one of the Departments which is harassing. Even for the purpose of gettting compensation under the Workmen's Compensation Act, we have to go to the Assistant Commissioner, then it has to go before a Magistrate. This cumbrous procedure should be taken away and the power should be given to the presiding officers of the Labour Tribunals, because they are qualified judges. For instance there is a compensation claim filed on my behalf in respect of a driver, which is pending in the Assistant Commissioner's Office in Bangalore for over six or seven months. Even the notice has not been issued so far.

Sir, today the workers' position in Mysore State is not safe and sound. I only request the Government through you at this juncture, and particularly the Chief Minister who is responsible for the allocation of portfolio, I feel that my friend Sri K. Puttaswamy should be only in charge of Law and Parliamentary Affairs so that he may be helpful to the Chair in giving guidance. The Labour Department may be given to some other Minister.

4-00 P.M.

† ಶ್ರೀ ಎಂ. ನಾಗಪ್ಪ (ರಾಯಚೂರ್).—ಸನ್ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿರುವ 9, 11, 26, ಈ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ನ್ಯಾಯ ಖಾತೆಯ ಬಗ್ಗೆ ಕೆಲವು ವಿಷಯ ಸಭೆಯ ಮುಂದೆ ಇಡುತ್ತೇನೆ ಈ ದಿವಸ ಈ ನ್ಯಾಯಾಂಗ ಖಾತೆಗೆ ಒಂದು ರೋಗ ಅಂಟಿ ಕೊಂಡಿರುವುದು ಅಂದರೆ ಹಿಂದಿನ ಕಾಲದಲ್ಲಿ ವಂಶ ಪಾರಂಪರ್ಯವಾಗಿ ರಾಜರ ಮಕ್ಕಳು ರಾಜರಾಗ ಬೇಕು ಎಂದು ಹೇಳಿದ ಹಾಗೆ ಜ್ಯುಡಿಶಿಯಲ್‌ನಲ್ಲಿ ಕೂಡ ಈ ರೋಗ ತರಲು ಹೊರಟಿದ್ದಾರೆ. ಜಡ್ಜರಾಗಿದ್ದವರ ಮಕ್ಕಳು ಎಷ್ಟು ಜನ ಜಡ್ಜರಾಗಿದ್ದಾರೆ ಎನ್ನುವ ಲೆಕ್ಕ ನೋಡಿದರೆ ಸರಿಯಾದ ಲೆಕ್ಕ ಸಿಕ್ಕುತ್ತದೆ ಎಂದು ನಾನು ಭಾವಿಸಿದ್ದೇನೆ. ಇಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟಾಗದಂತೆ, ವಂಶಪಾರಂಪರ್ಯವಾಗಿ ಬರತಕ್ಕಂಥ ಸನ್ನಿವೇಶವನ್ನು ತಪ್ಪಿಸಬೇಕು ಎಂದು ಹೇಳಿ ಈ ವಿಷಯ ಇಲ್ಲಿಗೇ ನಿಲ್ಲಿಸುತ್ತೇನೆ.

ಇನ್ನೊಂದು ವಿಷಯವೆಂದರೆ ಜ್ಯುಡಿಷಿಯಲ್ ಯಾವ ಮಟ್ಟದಲ್ಲಿ ಇರಬೇಕೋ ಆ ಮಟ್ಟದಲ್ಲಿ ಇಲ್ಲ ಎಂದು ವಿಷಾದಪಡುತ್ತೇನೆ. ರಾಯಚೂರು ಜಿಲ್ಲೆಯ ಬಗ್ಗೆ ಎರಡು ಉದಾಹರಣೆ ನಾನು ಕೊಡುತ್ತೇನೆ. ದೇವದುರ್ಗದ ಮ್ಯಾಜಿಸ್ಟ್ರೇಟರ ಬಗ್ಗೆ ಒಂದು ವಿವಾದ ಕೋರ್ಟಿನಲ್ಲಿ ಇದೆ. ಇನ್ನೊಂದು ಸಿಂಧನೂರು ಬಾರ್ ಅಸೋಸಿಯೇಷನ್ ವಿಚಾರ ಕೂಡ ಕೋರ್ಟಿನಲ್ಲಿ ಪೆಂಡಿಂಗ್ ಇದೆ. ದಯವಿಟ್ಟು ಈ ಎರಡು ಉದಾಹರಣೆ ಬಗ್ಗೆ ತಾವು ವಿಚಾರ ಮಾಡಬೇಕು ಎಂದು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ತಾವು ಹೇಳುತ್ತಿರುವುದು ನನಗೆ ಅರ್ಥವಾಗಲಿಲ್ಲ. ರಾಯಚೂರು ಕೋರ್ಟ್ ವಿಚಾರ ದಯವಿಟ್ಟು ಸ್ಪಷ್ಟಪಡಿಸುತ್ತೀರಾ ?

ಶ್ರೀ ಎಂ. ನಾಗಪ್ಪ.—ಸಿಂಧನೂರು ಬಾರ್ ಅಸೋಸಿಯೇಷನ್ ಬಗ್ಗೆ ಕಂಪ್ಲೇಂಟ್ ಇದೆ, ಕರಪ್ಷನ್ ವಿಷಯ ಇರುವುದರಿಂದ ಆ ಪದ ಉಪಯೋಗಿಸಿ ಹೇಳಬಾರದು ಎಂದು ಹೇಳಲಿಲ್ಲ. ಈ ಎರಡು ಕಂಪ್ಲೇಂಟ್ಸ್ ಹೈಕೋರ್ಟಿಗೆ ಬಂದಿವೆ. ಅದನ್ನು ತಾವು ತರಿಸಿ ನೋಡಿದರೆ ಅದು ತಮ್ಮ ಅವಗಾಹನೆಗೆ ಬರುತ್ತದೆ.

ಕಾರ್ಮಿಕರ ವಿಚಾರದಲ್ಲಿ ಸರಕಾರ ದ್ರೋಹ ಮಾಡುತ್ತಿದೆ. ಸರಕಾರಿ ನೌಕರರ ಬಗ್ಗೆ ಎಷ್ಟು ಆಸ್ಥೆ ವಹಿಸುತ್ತಾರೋ ಅಷ್ಟು ಆಸ್ಥೆ ಕಾರ್ಮಿಕರ ವಿಚಾರದಲ್ಲಿ ವಹಿಸುತ್ತಿಲ್ಲ. ವ್ಯವಸಾಯ ಕಾರ್ಮಿಕರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ಅನೇಕ ಕಾರ್ಮಿಕರ ಯೂನಿಯನ್‌ಗಳು ಇವೆ. ಕೆಲವು ಸಂಸ್ಥೆಗಳಲ್ಲಿ ಕೂಲಿಗಾರರು ಇದ್ದಾರೆ. 30–35 ಲಕ್ಷ ಕಾರ್ಮಿಕರ ಸಂಖ್ಯೆ ಇದೆ. ಇವರ ಬಗ್ಗೆ ನಿಮ್ಮ ನೀತಿ ಏನು ? ಪುಸ್ತಕದಲ್ಲಿ ಮಾತ್ರ ಹೇಳುತ್ತೀರಿ. ಕನಿಷ್ಠ ವೇತನ ಮಂಡಲ ನೇಮಿಸುತ್ತೇವೆಂದು ಹೇಳಿದ್ದೀರಿ. ಕನಿಷ್ಠ ವೇತನ ಮಂಡಳಿಯ ರಿಪೋರ್ಟ್ ಸರಕಾರ ಒಪ್ಪಿಕೊಂಡು ಯಾವ ದೃಷ್ಟಿಯಲ್ಲಿ ಅದನ್ನು ಅನುಸರಿಸುತ್ತೀರಿ ? ಅವರಿಗೆ ಎಷ್ಟು ವೇತನ ಕೊಡಿಸುತ್ತೀರಿ ? ಬರಿ ವೇತನ ಮಂಡಲ ನೇಮಕ ಮಾಡುವುದರಿಂದ ಈ ಪ್ರಶ್ನೆ ಪರಿಹಾರವಾಗುತ್ತದೆ ಎಂದು ತಿಳಿದುಕೊಂಡಿರುವಿರಾ ! ಮಂಡಲ ನೇಮಕ ಮಾಡಿದ ಮೇಲೆ ರಿಪೋರ್ಟ್ ಒಪ್ಪಿಕೊಂಡು ಮಿನಿಮಂ ವೇಜಸ್ ಆಕ್ಟ್ ಕಾರ್ಯ ರೂಪದಲ್ಲಿ ತರದೇ ಇದ್ದರೆ ಅದು ಒಳ್ಳೆಯದಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಜಗತ್ತಿಗೆ ತೋರಿಸಬೇಕು. ಗುಲಬರ್ಗದಲ್ಲಿಯ ಎಂ. ಎಸ್. ಕೆ. ಮಿಲ್. ಬಗ್ಗೆ ನಿಮ್ಮ ನೀತಿ ಏನು ? ಅಲ್ಲಿ ಮೂರು ಯೂನಿಯನ್ನುಗಳು ಇವೆ ಎರಡು ಯೂನಿಯನ್ನುಗಳು ಒಂದು ಕಡೆಯಾದರೆ ಒಂದು ಯೂನಿಯನ್ನು ಇಂಟಕ್‌ದ್ದಾಗಿದೆ. ಈ ಎರಡು ಯೂನಿಯನ್‌ಗಳಲ್ಲಿಯ ಸದಸ್ಯರ ಸಂಖ್ಯೆ ಎಷ್ಟು ! ಇನ್ನೊಂದು ಯೂನಿಯನ್ನಿನಲ್ಲಿರತಕ್ಕ ಸದಸ್ಯರ ಸಂಖ್ಯೆ ಎಷ್ಟು ? ಈ ಎರಡು ಯೂನಿಯನ್ನುಗಳ ಸಂಖ್ಯೆ ಕೂಡಿಸಿದರೆ ಅದಕ್ಕಿಂತ ಹೆಚ್ಚಾಗಿದೆ ಯಲ್ಲವೇ ! ಒಂದು ಯೂನಿಯನ್ನಿನ ತೀರ್ಮಾನವನ್ನು ಬೇರೆ ಎರಡು ಯೂನಿಯನ್ನುಗಳ ಮೇಲೆ ಹೇರತಕ್ಕಂಥಾದ್ದು ವಿವಾದಾಸ್ಪದವಲ್ಲವೇ ! ಈಗ ಮೂರು ಯೂನಿಯನ್ನುಗಳನ್ನು ನಿಲ್ಲಿಸಿ ಬಿಟ್ಟಿದ್ದೀರಿ. ಕಾರ್ಮಿಕರು ಕಷ್ಟ ಅನುಭವಿಸುತ್ತಿದ್ದಾರೆ. ಇದನ್ನು ಬಹಳ ನೊಂದ ಮನಸಿನಿಂದ ಹೇಳಬೇಕಾಗಿದೆ. ಇದು ನಿಮ್ಮ ನೀತಿಯೇ ? ನಿಮ್ಮ ನೀತಿಯನ್ನು ಪುನರ್ ಪರಿಶೀಲನೆ ಮಾಡ ಬೇಕು. ಕೂಲಿಕಾರರು ಕೆಲಸಕ್ಕೆ ಬರಲು ತಯಾರು ಇದ್ದಾರೆ ಈ ಬಗ್ಗೆ ನಾನು ಆಶ್ವಾಸನೆ ಕೊಡುತ್ತೇನೆ. ಮದ್ರಾಸಿನವರು ಈ ದಿವಸ ಒಂದು ಬಹಳ ದೊಡ್ಡ ಕೆಲಸವನ್ನು ಸಾಧನೆ ಮಾಡಿ ದ್ದಾರೆ. ಏನೆಂದರೆ ಮೇ ತಿಂಗಳಿನ ಮೊದಲನೇ ದಿನವನ್ನು ಸಾರ್ವಜನಿಕ ರಜಾದಿನವನ್ನಾಗಿ ಡಿಕ್ಲೇರ್

ಮಾಡಿದ್ದಾರೆ. ಇಲ್ಲಿ ನಮ್ಮ ಸರ್ಕಾರದವರೂ ಕೂಡ ಈ ಕಾರ್ಮಿಕರ ಹಿತರಕ್ಷಣೆಯಲ್ಲಿ ಬಹಳ ಮುಂದುವರಿದಿತಕ್ಕವರೆಂದು ಹೇಳಿಕೊಳ್ಳುತ್ತಿರುವುದರಿಂದ ಅಲ್ಲಿ ಮದ್ರಾಸ್ ಸರ್ಕಾರದವರು ಮಾಡಿರುವಂತೆ ಇಲ್ಲಿಯೂ ಮೇ ತಿಂಗಳ ಮೊದಲನೆಯ ದಿನವನ್ನು ರಜಾದಿನವನ್ನಾಗಿ ಡಿಕ್ಲೇರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಒಂದು ಬಹಳ ಮುಖ್ಯವಾದದ್ದು. ಈ ದಿವಸ ಇಂಥ ಒಂದು ಹಾಲಿಡೆಯನ್ನು ಡಿಕ್ಲೇರ್ ಮಾಡಿರತಕ್ಕವರು ಆ ದೂರದಲ್ಲಿರತಕ್ಕ ಬಂಗಾಳ ರಾಜ್ಯದವರಲ್ಲದೆ ನಮ್ಮ ಪಕ್ಕದ ರಾಜ್ಯದವರಾದ ಮದ್ರಾಸಿನ ಸರ್ಕಾರದವರು ಡಿಕ್ಲೇರ್ ಮಾಡಿದ್ದಾರೆ. ಹಾಗೆ ಇನ್ನೂ ಅನೇಕ ರಾಜ್ಯಗಳಲ್ಲಿ ಇದನ್ನು ಬಹಳ ಆಸಕ್ತಿಯಿಂದ ಮಾಡಿದ್ದಾರೆ. ನಮ್ಮ ಸರ್ಕಾರದವರೂ ಆ ತತ್ವವನ್ನು ಒಪ್ಪಿಕೊಂಡು ಇಲ್ಲಿಯೂ ಆ ರೀತಿ ರಜಾವನ್ನು ಡಿಕ್ಲೇರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದಲ್ಲಿ ಕೆಲಸಮಾಡತಕ್ಕ ನಾಲ್ಕನೇ ದರ್ಜೆಯ ನೌಕರಿಯಲ್ಲಿರತಕ್ಕ ವರ್ಗದವರಿಗಾದರೂ ತಿಂಗಳ 100-110 ರೂಪಾಯಿಗಳ ವೇತನ ಸಿಕ್ಕಿದರೆ ಅದೇ ಖಾಸಗೀ ಕ್ಷೇತ್ರದಲ್ಲಿ ಒಬ್ಬ ಸಾಹುಕಾರನಲ್ಲಿ ಕೆಲಸ ಮಾಡತಕ್ಕ ಒಬ್ಬ ನೌಕರನಿಗೆ ತಿಂಗಳಿಗೆ 40-50 ರೂಪಾಯಿಗಳ ಮೇಲೆ ಪಗಾರ ಸಿಗುವುದಿಲ್ಲ. ಬರೀ ಟೇಬಲ್ಲಿನಿಂದ ಟೇಬಲ್ಲಿಗೆ ಕಾಗದಗಳನ್ನು ಎತ್ತಿಡತಕ್ಕ ಮನುಷ್ಯನಿಗೆ ತಿಂಗಳಿಗೆ 100-110 ರೂಪಾಯಿಗಳ ಸಂಬಳ ಸಿಕ್ಕುತ್ತಿದ್ದರೆ ಖಾಸಗೀ ಕ್ಷೇತ್ರದಲ್ಲಿ ಆರು ಗಂಟೆಯ ಕಾಲ ಕೆಲಸ ಮಾಡುವುದಕ್ಕೆ ಬದಲು 12 ಗಂಟೆಗಳ ಕಾಲ ಕೆಲಸ ಮಾಡಿದಾಗ್ಯೂ ಅವನಿಗೆ 40 ರೂಪಾಯಿಗಳ ಸಂಬಳ ಸಿಕ್ಕುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಸರ್ಕಾರದವರು ಕಾರ್ಮಿಕ ಕ್ಷೇತ್ರದಲ್ಲಿರತಕ್ಕ ಜನರಿಗೂ ಹೆಚ್ಚು ವೇತನ ಮತ್ತು ಹೆಚ್ಚಿನ ಸೌಲಭ್ಯಗಳು ಸಿಕ್ಕುವುದಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಅವರಿಗೆ ಹೀಗೆ ಅನುಕೂಲಗಳನ್ನು ಕಲ್ಪಿಸತಕ್ಕ ಕಾನೂನುಗಳನ್ನು ಸರ್ಕಾರದವರು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದ ರಾಜ್ಯಮಟ್ಟದಲ್ಲಿ ನಿಯಮನಿಬಂಧನೆಗಳನ್ನು ಡ್ರಾಫ್ಟ್ ಮಾಡತಕ್ಕ ಸೆಕ್ಷನ್ ಏನಿದೆ ಅಲ್ಲಿರುವವರು ಸರಿಯಾಗಿ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಅವರು ಮಾಡತಕ್ಕ ಡ್ರಾಫ್ಟ್ ಬಿಲ್ಲುಗಳು ಬಹಳ ನ್ಯೂನತೆಗಳಿಂದ ಕೂಡಿರುತ್ತವೆ. ದಯವಿಟ್ಟು ಸರ್ಕಾರದವರು ಈ ವಿಷಯಕ್ಕೆ ಹೆಚ್ಚಿನ ನಿಗಾಕೊಡಬೇಕೆಂದು ಕೇಳಿಕೊಂಡು ಈ ಸಭೆಯ ಮುಂದಿರತಕ್ಕ ಬೇಡಿಕೆಗಳನ್ನು ವಿರೋಧಿಸಿ ನನಗೆ ಮಾತನಾಡುವುದಕ್ಕೆ ಇಷ್ಟು ಅವಕಾಶವನ್ನು ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri H. SIDDAVEERAPPA (Harihara).—Sir, I had no desire to intervene in this debate but for the fact that I wanted to share some of my views with this House about the utter futility of the discussions we are having in this House. I see an air of unreality about the proceedings simply because the Treasury Benches and more particularly a seasoned Parliamentarian of the type of my friend Sri Puttaswamy, has not been able to sense the feelings of the members of this House and has not been able to understand the purpose for which these discussions take place. They have gone on in a non-chalant manner in spite of my repeated requests and entreaties to them to phase the legislative work in such a manner as to see that every section of the House will have sufficient and adequate time to discuss these matters and offer their remarks, if any. Now, what is happening ? I was a member of the legislature even at the time when there was no responsible Government or even before Independence. Even in those days if any hon. Member of the House made any criticism, though they were not responsible, Government used to hear it with respect and with the feeling that here is a representative of the people who has come forward to ventilate the grievances of the people and they used to take meticulous care to see that what was said was referred to by them and attended to by them. Now I would like to ask the Hon. Minister as to how many suggestions that have been made in this House,

(SRI H. SIDDAVEERAPPA)

have been carried out. There is the Assurance Committee and I would like to know from him how many assurances held out in this House have been carried out and how many assurances and promises have been implemented ? And what is more, these gentlemen are not at all worried. They suffer us to exist because it is something like this. We have our marriage or funeral and after that we must have certain ceremonies. Like that the Constitution provides that this legislature must sanction these funds and that is why they are sitting there. For example take the case here. Here we are sitting and now there is no Upper House. So they cannot plead that they are in the Upper House and so the Ministers are there. Just see how many Ministers are sitting here. They treat us with utter contempt. They suffer us simply to exist. This is not the way in which Government should conduct legislative business. We have been telling them to take a vote on-account. They put us in a tight corner and just call the House on the last day *i.e.* hundred and eightieth day, because the Constitution provides that they have to call before the expiry of that period. What is more we have been requesting and entreating them to take a vote-on-account and make it a purposeful and meaningful discussion. They don't agree and because they have a brute majority they think that they can go on in their own way. If this is the way in which legislative work is to be carried out, it has no-meaning. Take the interpellations, of course now there is a little improvement in getting replies It is a fashion nowadays to sidetrack the issues and not to refer to any criticism—start something like a *hari katha* say something and get out of it. This is not the way in which they should reply to the debates. They are not taking to this work seriously and they have been taking it rather very lightly in a way which is not good for democracy. Supposi g tomorrow it is their turn and they are treated like this, how would they feel ? They are making a mockery of democracy. Democracy is not functioning here. As a matter of fact, in Parliament or elsewhere if even one hundredth of the criticism that was levelled here was levelled, they would have taken it seriously. Now they have become something like a Hubli buffalo; they don't care. They take lightly whatever we say and they say they would apply the guillotine after 6 O'clock. They have been assured of their money for one year. Even then they come forward with Supplementary Demands of the order of Rs. 150 crores within a week of the passing of the budget. That should not be the way. They are more worried about getting entrenched in their seats of power ; they do not bother as to what happens to the State. The administration has become so loose that people are groaning and we really do not know what to say for this. I certainly feel that I could have advocated the abolition of the legislature but for the fact that the Constitution provides that a legislature is a limb of the Constitution. But I would certainly advocate that very strong measures must be taken against a Government of this type which poohpoohs democracy. There

is no kernel now and you have got only the shell. They are not believers in democracy ; they are simply believers in getting along with formalities. I therefore appeal to the Hon. Minister for Parliamentary Affairs in whom I have got a ray of hope to make up his mind in this behalf. Let him not be shell-bound. If parliamentary democracy is to survive in this State, they have to wake up now and see that meaningful discussions are permitted. On the other hand, you ring the bell because you are worried about your time. It is part of your duty to see that democracy properly functions. You cannot lift up your hands and say that they have given me a programme and I have to stick to the time schedule. You have to come to the rescue of this House. You should have to safeguard our interests. I am sorry that is going into the records. I am not making a complaint against you. Probably they are misusing your good offices. I have brought this to your notice any number of times and requested you that you must tell them that they have not been discharging their duties properly.

I shall touch one more important point and close. Rules are not properly framed for this House. Your predecessor constituted a Committee to go through the Rules and revise them so that we may discharge our duties better. We sat nearly for 1½ to 2 years and looked into them. We have spent quite a lot of time in examining them and revising them. But here is an Hon. Minister who has not got the capacity to bring them here and see that those revised Rules are brought into force. What shall we say about him ? He says he has no time. The Ministers have no time except to get money. Today this Minister wants more than Rs. 3½ crores. The other day we saw the sorry spectacle of the Chief Minister carrying away Rs. 100 crores with a discussion of barely three hours. I have been continuously telling the Hon. Minister for Parliamentary Affairs to look into the proposed Rules and see that they are introduced so that the discussions in this House become purposeful, beneficial and are in the interests of the State. He has not done it. This one thing is sufficient to condemn him as an ineffectual Minister, if not as an inefficient and incapable Minister.

I have another point to impress upon the Government before I conclude. The Ministers have been giving a deaf ear to what we say. I appeal to them not to do it. We are all hon. members of this House. When we were in the Treasury Benches, did we do like that ? The Hon. Minister is very well aware that we were highly sensitive even to the slightest criticism of the Government. Every point of the hon. Members was met and answered. I think my hon. friend Sri Puttaswamy will bear with me when I say that we would not have allowed things to go on like this. There is no respect for the proceedings in the House from the Treasury Benches, which are practically empty. The very fact that even now not more than two to three Ministers are present goes to show that the Hon. Members are addressing empty benches. Why should not the Minister come, sit here and listen to us ? Are they not Members ? There is clear dereliction of duty on the part of the Ministers. Some of

(SRI H. SIDDAVEERAPPA)

them are spending their time in the Lounge ; some of them are spending their time chit-chatting ; some of them are spending their time indulging in all sorts of discussions. They don't take seriously what happens here. They take things easy; you will have to pull them up.

I shall refer to only one other important point and conclude. It is enough if I make it abundantly clear that the legislators have not been given proper facilities to effectively function as legislators. Here we have got different parties. The Chair has to make necessary arrangements for that purpose so that the House may function properly. I have addressed a letter to you. I have requested you to give a room to my Party with some minor facilities so that we can function properly. We have not been treated well. We are something like untouchables so far as the Treasury Benches are concerned. I am requesting you to see that all reasonable facilities are given to us so that promising memb rs like these and others can rise to their full stature and contribute their mite to the debates and the proper functioning of democracy. The Government also should look to our facilities and amenities. I want some of the Ministers to go to the Legislators' Home and taste the food there. If you eat the food for two days, I am sure you will get dysentery. Imagine the fate of the members who have to take food continuously there. The Government also should look to the facilities of the members. I tell them beware in time if democary is to function.

This is my last appeal. People have lost all interest in these things. People have been asking what is the use of spending Rs 25 thousand a day for a day's sitting of the Legislature if nothing worthwhile comes out of the discussions. The Treasury Benches should change their attitude towards the House and see that sufficient time is allotted for discussion of each issue threadbare and discussions become useful and meaningful. If something useful and beneficial has to be done to the State, something more will have to be done to make our discussions not only meaningful but also beneficial to our State.

With these few words, I oppose this Demand.

† ಶ್ರೀ ಎಂ. ಎಂ. ಜಾಲಿಸಟಗಿ (ಭಟಕಳ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿರುವ 9, 11, 26ನೇ ಬೇಡಿಕೆಗಳನ್ನು ವಿರೋಧಿಸುತ್ತಾ, ಕೆಲವು ವಿಚಾರಗಳನ್ನು ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ. ನಮ್ಮಲ್ಲಿ ಕೆಲವು ನಂಬರುಗಳು ಹತ್ತು ವರ್ಷ, ಹದಿನೈದು ವರ್ಷ, ಇಪ್ಪತ್ತು ವರ್ಷದಿಂದ ಪೆಂಡಿಂಗ್ ಇವೆ. ಅವುಗಳ ಬಗ್ಗೆ ಸವಿಸ್ತಾರವಾಗಿ ಹೇಳಲು ಇಚ್ಛಿಪಡುವುದಿಲ್ಲ. ಆದರೆ ಬಾಕಿ ಉಳಿದಿರತಕ್ಕ ಈ ನಂಬರುಗಳನ್ನು ಆದಷ್ಟು ಬೇಗನೆ ನಿಕಾಲೆ ಮಾಡುವುದಕ್ಕೆ ಯೋಗ್ಯ ಕಾಳಜಿ ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಂಗ್ಲೀಷನಲ್ಲಿ ಒಂದು ಗಾದ ಇದೆ. ಜಸ್ಟಿಸ್ ಡಿಲೇಡ್ ಈಜ್ ಜಸ್ಟಿಸ್ ಡಿನೈಡ್ ಎಂದು. ಕೆಲವು ನಂಬರುಗಳು ಲೋಯರ್ ಕೋರ್ಟಿನಲ್ಲಿ ಇವೆ, ಕೆಲವು ಅಪೀಲ ಕೋರ್ಟಿನಲ್ಲಿ ಇವೆ, ಕೆಲವು ರಿಟ್ ಪಿಟಿಷನ್ಸ್ ಹೈ ಕೋರ್ಟಿನಲ್ಲಿ ಬಾಕಿ ಉಳಿದಿವೆ. ಬಾಕಿ ಉಳಿದಿರುವ ಈ ನಂಬರುಗಳನ್ನು ಆದಷ್ಟು ಬೇಗನೆ ನಿಕಾಲೆ ಆಗುವಂತೆ ವ್ಯವಸ್ಥೆ ಮಾಡಲು ಸರಕಾರ ಏತಕ್ಕೆ ವಿಚಾರ ಮಾಡುವುದಿಲ್ಲ ಎಂದು ಕೇಳುತ್ತೇನೆ. ಆದಷ್ಟು ಬೇಗನೆ ಇವುಗಳ ವಿಚಾರಣೆಯಾಗಬೇಕು ಎಂದು ಸೂಚನೆ ಮಾಡುತ್ತೇನೆ. ಮೈಸೂರು ಸಿವಿಲ್ ಕೋರ್ಟ ಆಕ್ಟ್ ಪ್ರಕಾರ ಜಡ್ಜುಗಳಿಗೆ ಅಧಿಕಾರ ಕೊಟ್ಟಿದ್ದೀರಿ. ಅವರಿಗೆ ಕೆಲಸ ಹೆಚ್ಚಾಗಿದೆ.

ಆದರೆ ಲಾ ಕಮಿಷನ್ ಅವರು ಶಿಫಾರಸ್ಸು ಮಾಡಿದ ಪಗಾರದ ಸ್ಕೇಲು ಏತಕ್ಕೆ ಕೊಟ್ಟಿಲ್ಲ? ತ್ರಿಕೋಲ್ ಕಮಿಷನ್ ವರದಿಯಲ್ಲಿ ಇಂಥ ಶಿಫಾರಸ್ಸು ಏತಕ್ಕೆ ಬರಲಿಲ್ಲ? ಎಫೀಷಿಯನ್ಸಿ ಹೆಚ್ಚಾಗಬೇಕು, ಕೆಲಸ ಹೆಚ್ಚು ಮಾಡಬೇಕು ಎಂದು ಹೇಳುವುದಾದರ ಯೋಗ್ಯ ವೇತನ ಅವರಿಗೆ ಕೊಡಬೇಕಾದುದು ನ್ಯಾಯ. ಅವರಿಗೆ ಉತ್ತೇಜನ ಬರುವಂತೆ ಹಾಗು ಕಾಳಜಿ ಪೂರ್ವಕ ಕೆಲಸ ಮಾಡುವಂತೆ ಯೋಗ್ಯ ವಾತಾವರಣ, ಸನ್ನಿವೇಶ ನಿರ್ಮಾಣ ಮಾಡಬೇಕು. 40 ಜನ ಜಡ್ಜುಗಳು ಇದ್ದಾರೆ. ಲಾ ಕಮಿಷನ್ ಶಿಫಾರಸ್ಸು ಮಾಡಿದಂತೆ ಅವರಿಗೆ ವೇತನ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೇಯದಾಗಿ ನೇಮಣೂಕು ಮಾಡುವಾಗ್ಗೆ, ಇವರು ನಮ್ಮ ಸಂಬಂಧಿಕರು, ಇವರು ನಮ್ಮವರು ಎಂದು ಮಾಡದೆ, ಯೋಗ್ಯತೆ ಇದ್ದವರನ್ನು ನೇಮಣೂಕು ಮಾಡಬೇಕು ಎಂದು ಹೇಳುತ್ತೇನೆ. ರಿಕ್ರೂಟ್‌ಮೆಂಟ್ ಮಾಡುವಾಗ ಜಾತಿ, ನೆಂಟರು ಇಷ್ಟರು ಎಂದು ನೇಮಕ ಮಾಡದೆ ಮೆರಿಟ್ ಮೇಲೆ ಯೋಗ್ಯತೆಯ ಮೇಲೆ ನೇಮಣೂಕು ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ನಮ್ಮಲ್ಲಿ ನಂಬರುಗಳು ಹೆಚ್ಚಾಗಿರುವುದರಿಂದ ಮುನ್‌ಸೀಫರು, ಸಿವಿಲ್‌ಜಡ್ಜ್ ಹುದ್ದೆಗಳನ್ನು ಹೆಚ್ಚು ಮಾಡಿಕೊಂಡು ಆದಷ್ಟು ಬೇಗ ಇದ್ದ ನಂಬರುಗಳನ್ನು ವಿಕಾಲೆ ಮಾಡಬೇಕು ಎಂದು ಸೂಚಿಸ ಬಯಸುತ್ತೇನೆ. ಕಾರವಾರ ಸಿವಿಲ್ ಕೋರ್ಟಿನಲ್ಲಿ, ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಐದು ಹತ್ತು ವರ್ಷ ಗಳಿಂದ ಕೆಲವು ಅಪೀಲುಗಳು ಪೆಂಡಿಂಗ್ ಇವೆ. ಅವು ವಿಕಾಲೆ ಆಗುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ನಮ್ಮ ಹೊನ್ನಾವರದಲ್ಲಿ ಬಿಲ್ಡಿಂಗ್ ಇದೆ. ಹೊನ್ನಾವರದಲ್ಲಿ ಒಂದು ಸಿವಿಲ್ ಕೋರ್ಟ್ ಹೆಚ್ಚಿಗೆ ಮಾಡಬೇಕು ಮತ್ತು ಈ ದಿಶೆಯಲ್ಲಿ ಪ್ರಯತ್ನ ಮಾಡಬೇಕು. ಇಲ್ಲಿ ಎಲ್ಲ ಅನುಕೂಲತೆ ಇದೆ.

ಇನ್ನು ಲೇಬರ್ ವಿಷಯ. ನಮ್ಮ ಜಿಲ್ಲೆಯ ವಿಚಾರದಲ್ಲಿ ಹೇಳುವುದಾದರೆ ಲ್ಯಾಂಡ್ ಲೆಸ್ ಲೇಬರರ್ಸ್ ಹರಿಜನರು ಗಿರಿಜನರು ಇದ್ದಾರೆ. ಅವರು ಬಹಳ ಹಿಂದುಳಿದವರು ಆಗಿದ್ದಾರೆ. ಆ ಜನ ಭೂಮಿಯಲ್ಲಿ ಕೆಲಸ ಮಾಡುತ್ತಾರೆ. ಅವರು ಮುಂದೆ ಬರುವಂತೆ ಶಿಕ್ಷಣ ಮೊದಲಾದ ನಾನಾ ಅನುಕೂಲತೆ ಒದಗಿಸಿ ಅವರು ಯೋಗ್ಯ ರೀತಿಯಲ್ಲಿ ಜೀವನ ಮಾಡುವಂತೆ ನೋಡಿಕೊಳ್ಳ ಬೇಕು. ಸಮಾಜ ಕಲ್ಯಾಣ ಇಲಾಖೆಯು ಈ ಬಗ್ಗೆ ದಕ್ಷತೆಯಿಂದ ಕೆಲಸ ಮಾಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

4-30 P.M.

ಇದೇ ಪ್ರಕಾರ ನಮ್ಮ ಕಡೆ ಹಾಲಕ್ಕಿ ಜನ ಎಂದು ಹರಿಜನ ಹಾಗೂ ಗಿರಿಜನರಲ್ಲಿರುತ್ತಾರೆ. ಇವರುಗಳಿಗೆ ಕೆಲಸ ಮಾಡಲು ಜಮೀನುಗಳು ಇಲ್ಲ. ಇವರಿಗೆ ಯಾವು ದಾದರೊಂದು ರೀತಿಯಲ್ಲಿ ಉದ್ಯೋಗದ ದಂದೆಯನ್ನು ಮಾಡಿಸಿಕೊಡಬೇಕು ಮತ್ತು ಶಿಕ್ಷಣ ಇಲಾಖೆಯಲ್ಲಿ ಇವರಿಗೆ ಅನುಕೂಲವಾಗುವಂತೆ ಸಣ್ಣ ಸಣ್ಣ ಉದ್ಯೋಗಗಳನ್ನು ಒದಗಿಸಿಕೊಡಬೇಕು. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಮಧಾರಿಗಳು ಎನ್ನುವ ಜನ ಇದ್ದಾರೆ. ಇವರೆಲ್ಲಾ ಲ್ಯಾಂಡ್‌ಲೆಸ್ ಲೇಬರರುಗಳು. ಇವರಿಗೆ ಯೋಗ್ಯವಾದ ಶಿಕ್ಷಣ ವ್ಯವಸ್ಥೆ ಇಲ್ಲ. ಇವರ ಮಕ್ಕಳಿಗೆ ಯೋಗ್ಯವಾದ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿ ಅವರಿಗೆ ಬೇರೆ ಬೇರೆ ಉದ್ಯೋಗ ಗಳನ್ನು ಕಲ್ಪಿಸಿಕೊಟ್ಟು ಇವರು ಸುಖವಾಗಿ ಜೀವನ ಮಾಡಲು ಅವಕಾಶ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಇಂತಹ ಬಡಜನರ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಹಳ್ಳಿಗಳಲ್ಲಿರುವ ಬಡ ಜನರಿಗೆ ಯಾವುದಾದರೊಂದು ಯೋಜನೆ ಮಾಡಿ ಸಹಾಯ ಮಾಡಬೇಕು. ಇದರ ಬಗ್ಗೆ ನಾನು ಕೆಲವು ಸೂಚನೆಗಳನ್ನು ಮಾಡ ಬಯಸುತ್ತೇನೆ. ಹಿಂದೆ ನಮ್ಮ ಹಳೆಯ ಮೈಸೂರಿನ ಭಾಗದಲ್ಲಿ ವಿಲೇಜು ಇಂಡಸ್ಟ್ರೀಸ್‌ಗಳೆಂದು ಮಾಡಿ ಜನಕ್ಕೆ ಬಹಳ ಸಹಾಯ ಮಾಡುತ್ತಿದ್ದರು. ಹಾಗೇ ನಮ್ಮ ಕಡೆ ಇರುವ ಕೆಲವು ಹಳ್ಳಿಗಳಲ್ಲಿ ಸುಮಾರು 5-10 ಮೈಲಿಗಳ ದೂರದಲ್ಲಿ ಯಾವ ಕಾಟೇಜು ಇಂಡಸ್ಟ್ರೀಸ್‌ಗಳನ್ನೂ ಮಾಡಲಿಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ಐದು ಮೈಲಿಗಳಿಗೆ ಒಂದು ಯೂನಿಟ್ ಎಂದು ಮಾಡಿ ಇದರೊಳಗೆ ಇರುವ ಜನರಿಗೆ ಯೋಗ್ಯವಾದ ಗೃಹ ಕೈಗಾರಿಕೆಗಳನ್ನು ಆರಂಭ ಮಾಡಿ ಸಹಾಯ ಮಾಡಬೇಕು. ಇಲ್ಲೆಲ್ಲಾ ಲ್ಯಾಂಡ್‌ಲೆಸ್ ಲೇಬರರುಗಳು ಇದ್ದಾರೆ. ಇವರುಗಳಿಗೆ ಜಮೀನು ಸಿಗದಿದ್ದರೆ ಇವರೇನೂ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಇವರಿಗೆಲ್ಲಾ ಅಗ್ರಿಕಲ್‌ಚರ್ ಕಾಲೋನಿ ಎಂದು ಮಾಡಬೇಕು. ಟಿಬೇಟನ್ಸ್ ಜನರಿಗೆ ಯಾವ ರೀತಿ ಕಾಲೋನಿಗಳನ್ನು ಮಾಡಿ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದಾರೋ ಅದೇ ರೀತಿ ಇಲ್ಲಿರುವ ಲ್ಯಾಂಡಲೆಸ್ ಲೇಬರರುಗಳ

(ಶ್ರೀ ಎಂ. ಎಂ. ಜಾಲಿಸಟಗಿ)

ಕಲ್ಯಾಣಕ್ಕಾಗಿ ಇಂತಹ ಒಂದು ಸ್ಕೀಂನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಇವನೆಲ್ಲಾ ಮಾಡಲು ಸರಕಾರ ದುಡ್ಡಿಲ್ಲ ಎಂದು ಹೇಳುತ್ತಾರೆ. ಇದಕ್ಕಾಗಿ ಇಲ್ಲಿ ಒಂದು ಕಾರ್ಪೊರೇಷನ್ ಎಂದು ಮಾಡಿಯಾದರೂ ಬಡ ಜನರ ಕಲ್ಯಾಣಕ್ಕಾಗಿ ತಕ್ಕ ಕ್ರಮ ಕೈಗೊಳ್ಳಬೇಕು. ಮಾನ್ಯ ಮಂತ್ರಿಗಳು ಬಹಳ ಕರುಣೆ ಉಳ್ಳವರು ಎಂದು ಹೇಳುತ್ತಾರೆ. ಇವರ ಅಧಿಕಾರದ ಅವಧಿಯಲ್ಲಾದರೂ ಬಡಜನರಿಗೆ ಅನುಕೂಲವಾಗುವಂತೆ ಒಳ್ಳೆಯ ಕೆಲಸ ಮಾಡುತ್ತಾರೆಂದು ನಂಬುತ್ತೇನೆ. ಅಗ್ರಿಕಲ್ಚರು ಲೇಬರರುಗಳ ಬಗ್ಗೆ ಯಾರಾದರು ಒಂದು ಸಂಘವನ್ನು ಮಾಡಿಕೊಂಡು ಮುಂದೆ ಬಂದರೆ ಸರಕಾರದವರು ಅವರಿಗೆ ಸಹಾಯ ಮಾಡಬೇಕು. ಹಾಗೆ ಮಾಡಿದರೆ ಬಡ ಜನರಿಗೆ ನಿಜವಾದ ಹಿತಸಾಧನೆ ಮಾಡಿದಂತಾಗುತ್ತದೆ. ಇವರ ಬಗ್ಗೆ ಎಲ್ಲ ಸಹಾಯ ಸೌಕರ್ಯಗಳನ್ನು ಸರಕಾರ ಕೊಟ್ಟು ಈ ಬಡ ಜನರು ಸುಖಜೀವನ ನಡೆಸಲು ಅನುಕೂಲ ಮಾಡಿಕೊಡಬೇಕು ಎಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಎಕರೆಯಲ್ಲಿ ರಬ್ಬರು ಪ್ಲಾಂಟೇಷನ್ ಮಾಡುತ್ತಾರೆ. ಇದೇ ರೀತಿ ಇತರ ಕಡೆಗಳಲ್ಲೂ ರಬ್ಬರು ಪ್ಲಾಂಟೇಷನ್ ಕಾರ್ಡಮಂ ಪ್ಲಾಂಟೇಷನ್ ಕೋ ಅಪರೇಟೀವ್ ಸೊಸೈಟಿಗಳ ಮುಖಾಂತರ ಮಾಡಲು ಅವಕಾಶ ಇದೆ. ಇದೂ ಅಲ್ಲದೆ ಇಲ್ಲಿ ಕೋಕೋ, ಕಾರ್ಡಮಂ ಪ್ಲಾಂಟೇಷನ್, ಪಾಂ ಆಯಿಲ್ ಸ್ಕೀಂ, ಕ್ಲೋವ್ಸ್ (ಲವಂಗ) ಪ್ಲಾಂಟೇಷನ್, ಕ್ಯಾಷ್ಯೂ ನಟ್ ಪ್ರೋಗ್ರಾಂ, ಪೈನಾಪಲ್ ಸ್ಕೀಂ ಹಾಗೂ ಇನ್ನಿತರ ಪ್ಲಾಂಟೇಷನ್‌ಗಳನ್ನೂ ಮಾಡಲು ಅವಕಾಶ ಇದೆ. ಇವುಗಳನ್ನು ಮಾಡಲು ಅವಕಾಶ ಕೊಟ್ಟರೆ ಇದರಿಂದ ಲ್ಯಾಂಡ್‌ಲೆಸ್ ಲೇಬರರ್‌ಗಳಿಗೆ ಹೆಚ್ಚಿನ ಉದ್ಯೋಗದ ಅವಕಾಶ ಸಿಗುತ್ತದೆ. ಮತ್ತು ಬಡ ಜನರಿಗೆ ಇದರಿಂದ ಕಲ್ಯಾಣ ಮಾಡಿದಂತಾಗುತ್ತದೆ ಮತ್ತು ನಮ್ಮ ರಾಜ್ಯದ ಕಲ್ಯಾಣವೂ ಆಗುತ್ತದೆಯಾದ್ದರಿಂದ ಇವನ್ನು ಸರಕಾರ ಆರಂಭ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮಿನಿಮಂ ವೇಜಸ್ ಆಕ್ಟನ್ನು ಅಮಲಿನಲ್ಲಿ ತಂದಿದ್ದೇವೆ ಎಂದು ಹೇಳುತ್ತಾರೆ. ಇವು ಎಲ್ಲ ಕಡೆ ಅನ್ವಯವಾಗುವಂತೆ ಅಗ್ರಿಕಲ್ಚರು ಲೇಬರುಗಳಿಗೂ ಅಪ್ಲೈ ಆಗುವಂತೆ ಮಾಡಿದರೆ ಇದರಲ್ಲಿ ಹೊಸದಾಗಿ ಕೆಲವು ಸಮಸ್ಯೆಗಳು ಬರುತ್ತವೆ. ಈ ಕಾಯಿದೆ ಎನ್ನುವುದು ಈಗ ಬರೀ ಪುಸ್ತಕದಲ್ಲಿದೆಯೇ ಹೊರತು ಇನ್ನೂ ಕೃತಿಗೆ ಬಂದಿಲ್ಲ. ಇನ್ನು ನಮ್ಮ ಕರಾವಳಿ ಪ್ರದೇಶದಲ್ಲಿ ದೊಡ್ಡ ಕೋಸ್ಟು ಇರುವುದರಿಂದ ಇಲ್ಲಿ ಮೀನುಗಾರಿಕೆ ಜನ ಇದ್ದಾರೆ. ಇವರಿಗೆ ಸರಿಯಾದ ವಸತಿ ಸೌಕರ್ಯಗಳೇ ಇಲ್ಲ. ಇವರಿಗೆ ವಸತಿ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಇದರ ಬಗ್ಗೆ ಸರಕಾರಕ್ಕೆ ರೆಪ್ರಸೆಂಟೇಷನ್‌ಗಳನ್ನು ಕೊಡುತ್ತಿದ್ದರೂ ಇವರ ಕೂಗು ಸರಕಾರಕ್ಕೆ ಕೇಳುತ್ತಲೇ ಇಲ್ಲವೆಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಮ್ಯಾನೇಜುಮೆಂಟಿನಲ್ಲಿ ಲೇಬರುಗಳಿಗೂ ಗೌರವದ ಸ್ಥಾನವಿರಬೇಕು.

ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ನನಗೆ ಹತ್ತು ನಿಮಿಷಗಳು ಈ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟುದಕ್ಕಾಗಿ ನಾನು ತಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. 9, 11, ಮತ್ತು 26ನೇ ಬೇಡಿಕೆಗಳ ವಿಷಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ ಮತ್ತು ಕೆಲವು ಮಾನ್ಯ ಸದಸ್ಯರು ಉಪಯುಕ್ತವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ಮಾನ್ಯ ಸದಸ್ಯರನೇಕರು ಖೋತಾ ನಿರ್ಣಯಗಳನ್ನು ಮಂಡಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಶ್ರೀ ನಾಗಪ್ಪನವರೇ ಹೆಚ್ಚು ಖೋತಾ ನಿರ್ಣಯಗಳನ್ನೂ ಮಂಡಿಸಿದ್ದಾರೆ. ಇಲ್ಲಿ ನಾನು ಒಂದೇ ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ಅದು ವಿಧಾನಪರಿಷತ್ತನ್ನು ರದ್ದುಪಡಿಸಬೇಕು ಎಂಬುದು. ಮಾನ್ಯ ಹಣಕಾಸಿನ ಸಚಿವರು ಕೊಟ್ಟ ಹೇಳಿಕೆ ಮೊನ್ನೆ ಪತ್ರಿಕೆಗಳಲ್ಲಿ ಬಂದುದನ್ನು ನಾನು ಆಸ್ಪತ್ರೆಯಲ್ಲಿದ್ದಾಗ ಓದಿದ್ದೇನೆ. ಅಲ್ಲಿ ತಜ್ಞರಿದ್ದಾರೆ, ಅವರು ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಾರೆ. ನಾವೇನೂ ವಿಧಾನ ಪರಿಷತ್ತನ್ನು ರದ್ದುಪಡಿಸುವ ಪ್ರಶ್ನೆಯೇ ಇಲ್ಲ ಮತ್ತು ನಮ್ಮ ಪ್ರಾಂತದಲ್ಲಿ ಇದನ್ನು ತೆಗೆಯುವುದಿಲ್ಲ ಎಂದು ಅವರು ಹೇಳಿದ್ದಾರೆ. ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಮುಖ್ಯ ಮಂತ್ರಿಗಳಲ್ಲೂ ಹೇಳುತ್ತೇನೆ. ಹಿಂದೆ ಇದೇ ವಿಧಾನ ಸಭೆಯಲ್ಲಿ ಇದರ ಅವಶ್ಯಕತೆ ಇಲ್ಲ, ಇದನ್ನು ರದ್ದುಪಡಿಸಬೇಕು ಎಂದು ನಿರ್ಣಯ ಬಂದಿತ್ತು. ಬೈಕ್ಯಾಮರಲ್ ಲೆಜಿಸ್ಲೇಚರ್ ಎಂದು ಸಾರ್ವತ್ರಿಕವಾಗಿ ತಂದಿಲ್ಲ ಮತ್ತು ರಾಜ್ಯಾಂಗ

ದಲ್ಲೂ ನಿರ್ದಿಷ್ಟವಾದ ಸೂಚನೆಗಳನ್ನೂ ಕೊಟ್ಟಿಲ್ಲ. ಬೇಕಾದರೆ ಇದನ್ನು ಇಟ್ಟುಕೊಳ್ಳಬಹುದು ಇಲ್ಲದಿದ್ದರೆ ಬಿಡಬಹುದು ಎಂದು ಇದೆ. ಕೆಲವು ರಾಜ್ಯಗಳಲ್ಲಿ ಇಂದು ಪರಿಷತ್ತುಗಳಿವೆ, ಆದರೆ ದೇಶದ ಎಲ್ಲ ರಾಜ್ಯಗಳಲ್ಲಿಯೂ ಇಲ್ಲ. ಕೆಲವು ರಾಜ್ಯಗಳಲ್ಲಿ ವಿಧಾನಪರಿಷತ್ತನ್ನು ರದ್ದುಪಡಿಸಿಯೂ ಆಯಿತು. ಆದುದರಿಂದ ಸರಕಾರದ ಬೊಕ್ಕಸಕ್ಕೆ ಖರ್ಚಾಗತಕ್ಕ ಹಣವನ್ನುಳಿಸುವ ದೃಷ್ಟಿಯಿಂದ ಮತ್ತು ಎರಡು ಸಲ ಒಂದೇ ಕೆಲಸ ಮತ್ತು ಎರಡು ಕಡೆಗಳಲ್ಲಿ ಒಂದೇ ರೀತಿಯಾದ ಭಾಷಣಗಳೂ ಆಗುವುದನ್ನು ತಪ್ಪಿಸುವ ದೃಷ್ಟಿಯಿಂದ ವಿಧಾನ ಪರಿಷತ್ತನ್ನು ರದ್ದುಪಡಿಸುವುದು ಸೂಕ್ತ. ಹೀಗಿದ್ದರೂ ಸುಮ್ಮನೆ ಸುಂದರವಾದ ಒಂದು ಮನೆ ಇರಬೇಕು, ನಮ್ಮಲ್ಲಿ ಆಳುವ ಪಕ್ಷದವರಿಗೆ ಬೆಂಬಲ ಕೊಡಬೇಕು ಎಂದು ಈ ಮನೆಯನ್ನು ಮುಂದುವರಿಸಿಕೊಂಡು ಬಂದವಾಗಿದೆ. ಇದಕ್ಕಿಂತ ಹೆಚ್ಚಾಗಿ ಹೇಳುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಹಣಕಾಸಿನ ಮಂತ್ರಿಗಳು ಮತ್ತು ಪ್ರಜಾಸತ್ತೆಗೆ ಸಂಬಂಧಪಟ್ಟ ಮಂತ್ರಿಗಳು ನಮ್ಮ ರಾಜ್ಯದ ವಿಧಾನ ಪರಿಷತ್ತನ್ನು ರದ್ದು ಮಾಡುವ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ಹಿಂದೆ ಕೂಡ ಇದೇ ಸಭೆಯಲ್ಲಿ ವಿಧಾನಪರಿಷತ್ತನ್ನು ರದ್ದು ಮಾಡಬೇಕೆಂದು ಒಂದು ನಿರ್ಣಯದ ಮೂಲಕ ತೀರ್ಮಾನವಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ನನಗೆ ಜ್ಞಾಪಕವಿರುವಂತೆ ಆ ರೀತಿಯ ನಿರ್ಣಯ ಪಾಸಾಗಿಲ್ಲ.

ಶ್ರೀ ಎಸ್. ಗೋಪಾಲಗೌಡ.—ವಿಧಾನಪರಿಷತ್ತನ್ನು ರದ್ದು ಮಾಡುವ ಬಗ್ಗೆ ವಿಚಾರ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದು ನನ್ನ ಜ್ಞಾಪಕದಲ್ಲಿ ಇದೆ. ಇವತ್ತು ಕೆಲವರ ಜೀವನೋಪಾಯಕ್ಕೆ ಮಾರ್ಗ ಮಾಡಿಕೊಡಲು ಆ ಪರಿಷತ್ತು ಇದೆ. ಅದನ್ನು ರದ್ದುಪಡಿಸುವುದು ಸೂಕ್ತ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ರಾಜಧನವನ್ನು ರದ್ದು ಮಾಡುವ ವಿಚಾರ ನಮಗೆ ಸಂಬಂಧಪಟ್ಟದ್ದು ಅಲ್ಲ ಎಂದು ಮಾನ್ಯಮುಖ್ಯಮಂತ್ರಿಗಳು ಹೇಳಬಹುದು. ರಾಜಧನವನ್ನು ರದ್ದುಮಾಡಬೇಕು ಎಂಬುದಾಗಿ ಎರಡು ಕಾಂಗ್ರೆಸ್‌ನವರೂ ಕೂಡ ಬಹಳ ಜೋರಾಗಿ ಮಾತನಾಡುತ್ತಿದ್ದಾರೆ. ಅದನ್ನು ರದ್ದು ಮಾಡಬೇಕು ಎಂದು ನಾವು ಹೇಳಿ ಬಹಳ ವರ್ಷಗಳಾದವು. ರಾಜರುಗಳಿಗೆ ರಾಜಧನ ಕೊಡುತ್ತಿರುವುದಲ್ಲದೆ ಇನ್ನೂ ಅನೇಕ ಪ್ರಿವಿಲೇಜಸ್‌ಗಳನ್ನು ಕೊಡಲಾಗಿದೆ. ಪೋಸ್ಟಲ್ ಸ್ಟಾಂಪ್ ಇಲ್ಲದೆ ಅವರು ಕಾಗದ ಬರೆಯಬಹುದು. ಇದನ್ನು ನೋಡಿದರೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೋ ಎಂದು ನನಗೆ ಕಾಣಿಸುತ್ತಿಲ್ಲ. ರಾಜಧನವನ್ನು ರದ್ದು ಮಾಡುವುದು ಒಳ್ಳೆಯದು ಎಂದು ಸರ್ಕಾರದವರು ಒಪ್ಪಿದ್ದರೆ ಅದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ಹೇಳುತ್ತೇನೆ. ರಾಜಭವನವನ್ನು ಬಹಳ ವರ್ಷಗಳಿಂದ ಕಟ್ಟಿ ಅದನ್ನು ಚಂದ ಮಾಡಿದ್ದಾರೆ. ಅದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ, ಅಮಾನಿಯಾಗಿ ಕೆಲಸ ಮಾಡಿಸಲಾಯಿತೋ ಅಥವಾ ಟೆಂಡರ್ ಮೂಲಕ ಕೆಲಸ ಮಾಡಿಸಲಾಯಿತೋ ಎಂಬುದನ್ನು ತಿಳಿಸಬೇಕು. ರಾಜಭವನದ ಕೆಲಸ ಪೂರ್ತಿಯಾಗಿದೆಯೋ ಅಥವಾ ಇನ್ನೂ ಆಗಬೇಕೋ ಎಂಬುದನ್ನು ಸಹ ತಿಳಿಸಬೇಕು. ರಾಜಭವನದ ಪಕ್ಕದಲ್ಲಿರುವ ನಿವೇಶನದಲ್ಲಿ ಏತಕ್ಕೆ ಅಲ್ಲಿಯ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಡಬಾರದು ಎಂಬ ಬಗ್ಗೆ ಉತ್ತರ ಕೊಡಬೇಕು. ಎಂ. ಎಲ್. ಎ. ಗಳಿಗೆ ಸಾಕಷ್ಟು ಅನುಕೂಲಗಳು ಇಲ್ಲ ಎಂಬುದಾಗಿ ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದರು. ಎಂ. ಎಲ್. ಎ. ಗಳು ಏನು ಕೆಲಸ ಮಾಡಬೇಕು ಎಂಬ ಬಗ್ಗೆ ಒಂದು ನಿಯಮಾವಳಿ ಇಲ್ಲ. ಸ್ಕೂಲ್ ಟೀಚರ್ ಆದರೆ ಬೆಳಗ್ಗೆ 8 ಗಂಟೆಗೆ ಸ್ಕೂಲ್‌ಗೆ ಬರಬೇಕು ಎಂದು ನಿಯಮ ಇದೆ. ಅದರಂತೆ ಎಂ. ಎಲ್. ಎ. ಗಳಿಗೆ ಬೆಳಗ್ಗೆ ಎಷ್ಟು ಗಂಟೆಗೆ ಏಳಬೇಕು, ಏನು ಕೆಲಸ ಮಾಡಬೇಕು, ಯಾರ ಪರವಾಗಿ ಆರಿಸಿ ಬಂದವರು ಏನು ಕೆಲಸ ಮಾಡಬೇಕು ಎಂಬ ಬಗ್ಗೆ ಒಂದು ನಿಯಮಾವಳಿ ಇಲ್ಲ. ಇಷ್ಟಬಂದಾಗ ಏಳಬಹುದು, ಇಷ್ಟ ಬಂದಂತೆ ಕೆಲಸಗಳನ್ನು ಮಾಡಬಹುದು ಎಂಬಂತೆ ಆಗಿವೆ. ಸ್ವಾತಂತ್ರ್ಯ ಬಂದು 23 ವರ್ಷಗಳಾದರೂ ಕೂಡ ಈ ಬಗ್ಗೆ ಒಂದು ನಿಯಮಾವಳಿಯನ್ನು ಮಾಡಿಲ್ಲ. ನಿಯಮಾವಳಿಯನ್ನು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಜನರು ಮುಖ್ಯ ಮಂತ್ರಿಗಳಿಗೆ ಕಾಗದ ಬರೆದಮೇಲೆ ಅದರ ಒಂದು ಕಾಪಿಯನ್ನು ನನಗೂ ಸಹ ಕಳಿಸುತ್ತಾರೆ. ಮನೆ ತುಂಬಾ ಕಾಗದಗಳು ಇವೆ. ಅವಕ್ಕೆ ಉತ್ತರ ಕೊಡಲು ನಮಗೆ ಸ್ಟೆನೋ ಟೈಪಿಸ್ಟನ್ನು ಕೊಟ್ಟಿಲ್ಲ, ಸ್ಟಾಫ್ ಕೊಟ್ಟಿಲ್ಲ, ಟೆಲಿಫೋನ್ ಕೊಟ್ಟಿಲ್ಲ. ಇವೆಲ್ಲಾ ಅನುಕೂಲಗಳನ್ನು ಕೊಡದಿದ್ದರೆ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಿದ್ದಯ್ಯಕಾಶೀಮಠ್ ಅವರು ನಮಗೆ 400 ರೂಪಾಯಿಗಳ ಸಂಬಳ ಕೊಡಿಸಿ ಅನುಕೂಲ ಮಾಡಿದರು. ಅದರ ಜೊತೆಗೆ ನಾನು ಮೇಲೆ ಹೇಳಿದಂಥ ಅನುಕೂಲಗಳನ್ನು ಸಹ ಒದಗಿಸಿ ಕೊಡಬೇಕು. ಮುಖ್ಯವಾಗಿ ನಮ್ಮ ಕೆಲಸವೇನು ಎಂಬ ಬಗ್ಗೆ ಒಂದು ನಿಯಮಾವಳಿಯನ್ನು ತಯಾರು ಮಾಡಬೇಕು. ಅಸೆಂಬ್ಲಿಗೆ ಬರಬೇಕೆಂದು ನೋಟೀಸ್ ಕಳಿಸುತ್ತೀರಿ, ಬರದಿದ್ದರೆ ಏತಕ್ಕೆ ಬರಲಿಲ್ಲ ಎಂದು ಕೇಳುವುದಿಲ್ಲ. ಪ್ರಶ್ನೆಗಳನ್ನು ಕಳಿಸಬೇಕೆಂದು ನೋಟೀಸ್ ಕಳಿಸುತ್ತೀರಿ, ಪ್ರಶ್ನೆಗಳನ್ನು ಕಳಿಸದಿದ್ದರೆ ಏತಕ್ಕೆ ಕಳಿಸಲಿಲ್ಲ

(ಶ್ರೀ ಎಸ್. ಗೋಪಾಲಗೌಡ)

ಎಂದು ಕೇಳುವುದಿಲ್ಲ. ಇವೆಲ್ಲಾ ಕಾರಣದಿಂದ ಎಂ. ಎಲ್. ಎ. ಗಳ ಕೆಲಸವೇನು ಎಂಬ ಬಗ್ಗೆ ಒಂದು ನಿಯಮಾವಳಿಯನ್ನು ತಯಾರು ಮಾಡಬೇಕೆಂದು ಹೇಳುತ್ತೇನೆ. ಎಂ. ಎಲ್. ಎ. ಗಳಿಗೆ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ಬಾಲಬ್ರೂಯಿ ಪಕ್ಕದಲ್ಲಿರುವ ಜಾಗದಲ್ಲಿ ಮೂರು ನಾಲ್ಕು ಅಂತಸ್ತಿನ ಮನೆಗಳನ್ನು ಕಟ್ಟಿಸಿ ಎಲ್ಲ ಎಂ. ಎಲ್. ಎ. ಗಳಿಗೂ ಕೂಡ ಬಾಡಿಗೆ ರೂಪದಲ್ಲಿ 5 ವರ್ಷದವರೆಗೆ ಏತಕ್ಕೆ ಕೊಡಬಾರದು? ಆ ರೀತಿ ಕಟ್ಟಿಸಿ ಕೊಟ್ಟರೆ ಎಂ. ಎಲ್. ಎ. ಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ದೆಹಲಿಯಲ್ಲಿ ಎಲ್ಲ ಎಂ. ಪಿ. ಗಳಿಗೂ ಕೂಡ 120 ರೂಪಾಯಿಗಳ ಬಾಡಿಗೆ ಮೇಲೆ ಮನೆಗಳನ್ನು ಒದಗಿಸಿದ್ದಾರೆ. ಅದರಂತೆ ಅಧ್ಯಕ್ಷರು ಮನಸ್ಸು ಮಾಡಿ ಅಸೆಂಬ್ಲಿಗೆ ಹತ್ತಿರವಿರುವ ಜಾಗದಲ್ಲಿ ಮನೆಗಳನ್ನು ಕಟ್ಟಿಸಿ ನಮಗೂ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಕೆಲವರು ಸುದರ್ಶನ ಅತಿಥಿ ಗೃಹದಲ್ಲಿ ಇದ್ದಾರೆ, ಕೆಲವರು ಲೆಜಿಸ್ಲೇಚರ್ ಹೋಂನಲ್ಲಿ ಇದ್ದಾರೆ, ಮತ್ತೆ ಕೆಲವರು ಜನರಲ್ ಹಾಸ್ಟೆಲ್‌ನಲ್ಲಿ ಇದ್ದಾರೆ. ಎಲ್ಲರೂ ಒಂದು ಕಡೆ ಸೇರುವ ಸಂಭವ ಕಡಿಮೆಯಾಗಿದೆ. ಆದ್ದರಿಂದ ಎಲ್ಲರಿಗೂ ಒಂದೇ ಕಡೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಅದರಂತೆ ಮಂತ್ರಿಗಳು ಸಹ ಒಂದೇ ಕಡೆ ವಾಸ ಮಾಡುವುದು ಒಳ್ಳೆಯದು. ಈಗ ಒಬ್ಬರು ಒಂದು ಕಡೆ ಇದ್ದರೆ ಇನ್ನೊಬ್ಬರು ಇನ್ನೊಂದು ಕಡೆ ಇದ್ದಾರೆ. ವಿಠಲದಾಸಶೆಟ್ಟರು ಎಲ್ಲಿ ವಾಸ ಮಾಡುತ್ತಿದ್ದಾರೆಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ಮಂತ್ರಿಗಳು ಎಲ್ಲರೂ ಒಂದೇ ಕಡೆ ವಾಸವಾಗಿರುವಂತೆ ಮಾಡಲು ಒಂದು ಕಾಲೋನಿ ಮಾಡಿ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ನನಗೆ ಜಯಮಹಲ್‌ನಲ್ಲಿ ಒಂದು ಸೈಟನ್ನು ಅಲಾಟ್ ಮಾಡಿದ್ದಾರೆ. ಅದಕ್ಕೆ ನಾನು ಆಭಾರಿಯಾಗಿದ್ದೇನೆ. ರಾಜಕೀಯ ಜೀವನದಲ್ಲಿರುವವರಿಗೆ ಸೈಟ್‌ಗಳನ್ನು ಅಲಾಟ್ ಮಾಡುವುದರಲ್ಲಿ ನನ್ನ ಅಭ್ಯಂತರವಿಲ್ಲ. ಎಲ್ಲರಿಗೂ ಸ್ಮಶಾನದಲ್ಲಿ ಒಂದು ಸೈಟು ಹೊರಗಡೆ ಒಂದು ಸೈಟು ಇರಬೇಕಾಗುತ್ತದೆ. ಸೈಟು ಕೊಡುವುದಿದ್ದರೆ ನಿಯಮಾವಳಿಯನ್ನು ಅನುಸರಿಸಿ ಸೈಟ್ ಇಲ್ಲದವರಿಗೆ ಕೊಡಿ. 8–10 ಸೈಟುಗಳು ಇರುವವರಿಗೂ ಸಹ ಸೈಟನ್ನು ಅಲಾಟ್ ಮಾಡುವುದು ಸರಿಯಲ್ಲ. ಈ ರೀತಿ ಕೊಡುತ್ತಿರುವುದರಿಂದ ಜನರ ಮನಸ್ಸಿನಲ್ಲಿ ಎಂ. ಎಲ್. ಎ. ಗಳು ಇರುವುದು ದುಡ್ಡು ಹೊಡೆಯುವುದಕ್ಕಾಗಿ, ಜಮೀನು ಹೊಡೆಯುವುದಕ್ಕಾಗಿ ಮತ್ತು ಸೈಟ್‌ಗಳನ್ನು ಹೊಡೆಯುವುದಕ್ಕಾಗಿ ಎಂಬ ಅಭಿಪ್ರಾಯ ಬಂದಿದೆ. ಆದ್ದರಿಂದ ಸೈಟ್ ಇಲ್ಲದವರಿಗೆ ಸೈಟ್‌ಗಳನ್ನು ಅಲಾಟ್ ಮಾಡಬೇಕೆಂದು ಹೇಳುತ್ತೇನೆ. ಹೆಚ್ಚಿನ ಸೈಟ್‌ಗಳನ್ನು ಹೊಂದಿರುವವರು ಇದ್ದಾರೆ ಅಂತಹವರನ್ನು ವಿಚಾರಣೆಗೆ ಒಳಪಡಿಸುವ ಕಾಲವೂ ಸಹ ಬರುತ್ತದೆ. ಜಸ್ಟೀಸ್ ಬಗ್ಗೆ ನಾನು ಏನೂ ಹೇಳುವುದಿಲ್ಲ. ಕಾರ್ಮಿಕ ಕೂಲಿಗಳ ಸಂಬಂಧದಲ್ಲಿ ಶ್ರೀಮಾನ್ ಜಾಲಿಹಳ್ಳಿ ಅವರು ಹೇಳಿದರು. ಬೇಸಾಯ ಕೂಲಿಗಾರರ ಬಗ್ಗೆ ನಾನು ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ. ನಮ್ಮಲ್ಲಿ 25 ಲಕ್ಷ ಜನ ಬೇಸಾಯ ಕೂಲಿಗಾರರಿರಬಹುದೆಂಬ ಅಂದಾಜು ಇದೆ. ಇವರಲ್ಲಿ ಯೂನಿಯನ್ ಇಲ್ಲ. 1955ನೇ ಇಸವಿಯಲ್ಲಿ ಇವರಿಗೆ ಮಿನಿಮಮ್ ವೇಜಸ್ ಕೊಡುವ ಬಗ್ಗೆ ಒಂದು ಆಕ್ಟ್ ಮಾಡಲಾಗಿದೆ. ಅದನ್ನು ಮಾಡಿ ಕಾಲಾತೀತವಾಗಿದೆ. ಪ್ಲಾನ್‌ಟೇಷನ್‌ನಲ್ಲಿ ಕೆಲಸ ಮಾಡುತ್ತಿರುವ ಕೂಲಿಗಳಿಗೆ ಏನು ವೇಜಸ್ ಕೊಡಬೇಕೆಂದು ಕಾನೂನನ್ನು ಮಾಡಲಾಗಿದೆಯೋ ಅದರಂತೆ ಇವರಿಗೂ ಸಹ ವೇಜಸ್ ಕೊಡುವ ಬಗ್ಗೆ ಕಾನೂನು ಮಾಡಿ ದಿನಕ್ಕೆ ಗಂಡಸರಿಗೆ ಎರಡು ರೂಪಾಯಿಗಳನ್ನು ಮತ್ತು ಹೆಂಗಸರಿಗೆ ಒಂದು ರೂಪಾಯಿಯನ್ನು ಕೊಡಬೇಕು. ಈ ರೀತಿಯ ಕೂಲಿಯನ್ನು ವರ್ಷದ 365 ದಿವಸಗಳಿಗೂ ಸಹ ಕೊಡಬೇಕು.

365 ದಿನಗಳಿಗೂ ಒಂದು ದಿನಕ್ಕೆ ಒಬ್ಬ ಗಂಡಸಿಗೆ 2 ರೂಪಾಯಿ ಹೆಂಗಸಿಗೆ ಒಂದು ರೂಪಾಯಿ ಕೊಡಿ. ಹೆಂಗಸರು ಗರ್ಭಿಣಿಯರಾದರೆ ಒಂದು ತಿಂಗಳು ಮುಂಚೆ ರಜ ಮತ್ತು ಸಂಬಳ ಕೊಡಿ. ಮತ್ತು ಮೂರು ತಿಂಗಳ ಮೆಟರ್ನಿಟಿ ಸೌಲಭ್ಯವನ್ನು ಒದಗಿಸಿ ಕೊಡಿ. ಕೂಲಿಗಾರ ಅಡಿಕೆ ಕೀಳುವುದಕ್ಕೆ ಅಡಿಕೆ ಮರವನ್ನು ಹತ್ತಿ ಒಂದುವೇಳೆ ಅವನು ಸೊಂಟ ಮುರಿದುಕೊಂಡರೆ ಅದನ್ನು ಗುಣಪಡಿಸಿಕೊಳ್ಳುವುದಕ್ಕೆ ಅವನಿಗೆ ತಗಲುವ ವೆಚ್ಚವನ್ನು ತೋಟದ ಮಾಲೀಕನೇ ವಹಿಸಿ ಕೊಳ್ಳಬೇಕು. ಒಂದುವೇಳೆ ಅವನು ತೀರಿ ಹೋದರೆ, ಸತ್ತು ಹೋದರೆ ಅವನ ಕುಟುಂಬಕ್ಕೆ ಪರಿಹಾರವನ್ನು ಕೊಡುವುದೂ ಅವರ ಜವಾಬ್ದಾರಿ. ಇದಕ್ಕೆ ಸರ್ಕಾರದವರು ಒಂದು ಕಾನೂನು ಮಾಡಬೇಕು. ಮಿನಿಮಮ್ ವೇಜಸ್ ಆಕ್ಟ್ ತಿದ್ದುಪಡಿ ಮಾಡಬೇಕು. ಬೇಸಾಯ ಕಾರ್ಮಿಕರ ಅಭಿವೃದ್ಧಿಯಾಗಬೇಕು. ಬೇಸಾಯ ಕಾರ್ಮಿಕರು ಸುಮಾರು 25-30 ಲಕ್ಷ ಜನ ಇದ್ದಾರೆ. ಈಗ ಗದ್ದೆ ಕೊಯ್ಲು ಬಂತು ಎಂದರೆ ಎಲ್ಲರೂ ಆ ಬೇಸಾಯ ಕಾರ್ಮಿಕರನ್ನು ಕೆಲಸಕ್ಕೆ ಕರೆಯುತ್ತಾರೆ. ಆಮೇಲೆ ಅವರನ್ನು ಕೆಲಸಕ್ಕೆ ಕರೆಯುವವರು ಯಾರೂ ಇಲ್ಲ. ಆಮೇಲೆ ಅವರ ಜೀವನ ಹೇಗೆ? ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕು. ಗದ್ದೆ ಕೊಯ್ಲು ಆದಮೇಲೆ ಅವರನ್ನು ಕೆಲಸಕ್ಕೆ ಕರೆಯುವವರು ಯಾರು? ಅವರ ಜೀವನೋಪಾಯ ಹೇಗೆ? ಅಡಿಕೆ ಸುಲಿಯುವ ಕಾಲದಲ್ಲಿ ಈ

ಕಾರ್ಮಿಕರನ್ನು ಎಲ್ಲರೂ ನಮ್ಮ ಮನೆಗೆ ಬನ್ನಿ, ನಮ್ಮ ಮನೆಗೆ ಬನ್ನಿ ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯವರು ನೂರಾರು ಜನ ತೀರ್ಥಹಳ್ಳಿಗೆ ಅಡಿಕೆ ಸುಲಿಯುವುದಕ್ಕೆ ಬರುತ್ತಾರೆ. ಕೊಡಗಿನಲ್ಲಿ ಮಲಬಾರ್‌ನಲ್ಲಿ ಪ್ಲಾಂಟೇಷನ್‌ನಲ್ಲಿ ಅನೇಕ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈಗಲೂ ಕೂಡ ಅಲ್ಲಿ ದುಡಿಯುತಕ್ಕಂಥ ಜನಗಳಿಗೆ ಸರಿಯಾದಂತಹ ಔಷಧೋಪಚಾರವಿಲ್ಲ. ಅವರಿಗೆ ರಜಾ ಇಲ್ಲ. ಅವರು 365 ದಿನವೂ ದುಡಿಯಬೇಕು. ಕಾನೂನು ಪ್ರಕಾರ ಅವರೆಲ್ಲರಿಗೂ 8 ಗಂಟೆ ಕೆಲಸವನ್ನು ನಿಗದಿ ಮಾಡಬೇಕು. ಸಿಕ್ ಲೀವ್ ಕೊಡಬೇಕು. ಯಾರು ಯಾರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆಯೋ ಅವರ ಹೆಸರನ್ನು ರಿಜಿಸ್ಟರ್‌ನಲ್ಲಿ ಬರೆಯಬೇಕು. ಆ ರೀತಿಯ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಲ್ಲದೇ ಹೋದರೆ ಬೇಸಾಯ ಕೂಲಿಗಾರರಿಗೆ ಒಂದು ದೊಡ್ಡ ಕ್ಷೋಭೆ ಉಂಟಾಗುತ್ತದೆ. ಈ ಬೇಸಾಯ ಕೂಲಿಗಾರರಿಗೆ ವರ್ಷದಲ್ಲಿ 3 ತಿಂಗಳು ಮಾತ್ರ ಕೆಲಸ ಇರುತ್ತದೆ. ಇನ್ನು 9 ತಿಂಗಳು ಅವರಿಗೆ ಕೆಲಸ ಇರುವುದಿಲ್ಲ. ಈ 9 ತಿಂಗಳ ಅವಧಿಯಲ್ಲಿ ಅವರು ಎಲ್ಲಿರುತ್ತಾರೆ ಎಂಬ ಅಡ್ರೆಸ್ಸೇ ಗೊತ್ತಾಗುವುದಿಲ್ಲ. ಕೆಲವರು ಬದಿರಕ್ಕಿ ಹೆಕ್ಕುವುದಕ್ಕೆ ಹೋಗುತ್ತಾರೆ ಎಂದು ಕಾಣುತ್ತದೆ. ಬದಿರಕ್ಕಿ ಹೆಕ್ಕುವುದಕ್ಕೆ ಹೋಗುವುದು ಲಾಭದಾಯಕ ಎಂದು ಹಿಂದೆ ಶ್ರೀಮಾನ್ ಜತ್ತಿಯವರು ಹೇಳಿದ್ದರು. ಅದು ಸರಿಯಲ್ಲ. ಆ ರೀತಿ ಹೇಳುವುದು ಹುಣ್ಣಿನ ಮೇಲೆ ಬರೆ ಎಳೆದಂತಾಗುತ್ತದೆ. ಇವೊತ್ತು ಈ ಬೇಸಾಯ ಕೂಲಿಗಾರರು ಏನಿದ್ದಾರೆ ಅವರ ಜೀವನ ಬಹಳ ಕಷ್ಟಕರವಾಗಿದೆ. ಈಗ ನಮ್ಮ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣದ ಕಾನೂನು ಪ್ರಕಾರ ತಂದೆ ತಾಯಿಗಳು ಮಕ್ಕಳನ್ನು ಸ್ಕೂಲಿಗೆ ಕಳುಹಿಸದೇ ಹೋದರೆ ಅವರು ಶಿಕ್ಷಾರ್ಹರಾಗುತ್ತಾರೆ, ಅವರು ಜೈಲಿಗೆ ಹೋಗಬೇಕಾಗುತ್ತದೆ ಎಂದು ಹೇಳುತ್ತಾರೆ. ಬೇಸಾಯ ಕೂಲಿಗಾರರು ಅವರ ಮಕ್ಕಳನ್ನು ಸ್ಕೂಲಿಗೆ ಕಳುಹಿಸಬೇಕಾದರೆ ಪುಸ್ತಕ, ಬಟ್ಟೆ ವಗೈರೆಗಳನ್ನು ಎಲ್ಲಿಂದ ತರಬೇಕು ? ಕಟ್ಟಿಗೆ ಒಡೆದು, ಕಲ್ಲು ಕಿತ್ತು, ಕೂಲಿ ಮಾಡಿಕೊಂಡು ಜೀವನ ಮಾಡತಕ್ಕವರಿಗೆ ಸರ್ಕಾರದವರು ರಕ್ಷಣೆಯನ್ನು ಕೊಡದಿದ್ದರೆ ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತರುತ್ತೇವೆ ಎಂದು ಹೇಳತಕ್ಕದ್ದು ಸುಳ್ಳಾಗುತ್ತದೆ. ಈಗ ಅಸೆಂಬ್ಲಿಗೆ ಚುನಾಯಿತರಾಗಿ ಬರತಕ್ಕ ಪ್ರತಿನಿಧಿಗಳ ಬಗ್ಗೆ ಸಾರ್ವಜನಿಕರಿಗೆ ಏನೊಂದು ಭಾವನೆ ಬಂದಿದೆ ಎಂದರೆ ಇಲ್ಲಿಗೆ ಬರತಕ್ಕವರೆಲ್ಲರೂ ಬಹಳವಾಗಿ ಏನಾದರೂ ಲಪಟಾಯಿಸುವುದಕ್ಕೆ ಬರುತ್ತಾರೆ ಎನ್ನುವ ಭಾವನೆ ಇದೆ. ಅದಕ್ಕೋಸ್ಕರ ಈ ಸಭೆಯಲ್ಲಿರತಕ್ಕ ಸದಸ್ಯರಿಗೆ ರಕ್ಷಣೆ ಕೊಡಬೇಕು. ನಮ್ಮ ರಾಜ್ಯದಲ್ಲಿರತಕ್ಕ ಬಹುಸಂಖ್ಯಾತ ಹರಿಜನರಿಗ ಇರುವುದಕ್ಕೆ ಮನೆಯಿಲ್ಲ. ನಿವೇಶನ ಕೂಡ ಇಲ್ಲ. ಅವರು ಕಷ್ಟದಲ್ಲಿದ್ದಾರೆ. ಅದನ್ನು ಸರ್ಕಾರದವರು ಗಮನಿಸಬೇಕು.

ಈಗ ಸರ್ಕಾರದವರು ಕೆಲವು ನಿರುದ್ಯೋಗಿ ಇಂಜಿನಿಯರುಗಳಿಗೆ ಕೆಲಸವನ್ನು ಕೊಟ್ಟು ಅವರಿಗೆ ಒಂದು ತಿಂಗಳಿಗೆ 100 ರೂಪಾಯಿಗಳ ಸಂಬಳ ಕೊಡುವಂತಹ ಒಂದು ಪಾಲಿಸಿಯನ್ನು ಹಾಕಿಕೊಂಡು ಅದರ ಒಂದು ಸ್ಟೇಟ್‌ಮೆಂಟ್ ಅನ್ನು ಸರ್ಕಾರದವರು ಅನೌನ್ಸ್ ಮಾಡಿದ್ದಾರೆಂಬ ಸಮಾಚಾರ ಇವೊತ್ತು ರೇಡಿಯೋದಲ್ಲಿ ಬಂತು. ಸರ್ಕಾರದವರು ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳುವುದನ್ನು ಕೇಳಿ ಜನ ನಗುತ್ತಾರೆ. ಈಗಾಗಲೇ 22 ವರ್ಷಗಳ ಕಾಲ ಹಾಳಾಗಿದೆ. ಇವರು ಇನ್ನೂ ಏನೂ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ ಇದನ್ನು ಸರ್ಕಾರದವರು ಸಂಪೂರ್ಣವಾಗಿ ವಿಚಾರ ಮಾಡಿ ಸಮಗ್ರವಾದ ಒಂದು ಕಾನೂನನ್ನು ತಂದು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಬೇಸಾಯ ಕಾರ್ಮಿಕರಿಗೆ ಮಿನಿಮಮ್ ವೇಜಸ್ ಫಿಕ್ಸ್ ಮಾಡಬೇಕು. ಅದನ್ನು ಜಾರಿಗೆ ತರಬೇಕು. ಇವೊತ್ತು ಸರ್ವ ಸಾಮಾನ್ಯವಾಗಿ ದೇಶದಲ್ಲಿ ಭೀಕರ ನಿರುದ್ಯೋಗ ಬಂದಿದೆ. ಇದು ಅಶಾಂತಿ ಪರ್ವ. ಮುಂದಿನದು ಯುದ್ಧಪರ್ವ. ಬೆಂಗಳೂರಿನಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಇದೆ, ಅದರ ಹತ್ತಿರ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಉದ್ದಕ್ಕೂ ಕ್ಯೂ ನಿಂತಿರುತ್ತಾರೆ. ಆ ದೃಶ್ಯ ಹೃದಯವಿದ್ರಾವಕವಾದ ದೃಶ್ಯ. ಎಷ್ಟೋ ಜನಗಳು ಹಿಂದಿನ ದಿವಸವೇ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸಿನ ಹತ್ತಿರ ಕಾದಿರುತ್ತಾರೆ. ನಮ್ಮ ದೇಶದಲ್ಲಿ ಅನೇಕ ಜನ ನಿರುದ್ಯೋಗಿಗಳಿದ್ದಾರೆ. ಅವರೆಲ್ಲರಿಗೂ ಉದ್ಯೋಗವನ್ನು ಕೊಡುವುದಕ್ಕೆ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ಅಭಿವೃದ್ಧಿಪಡಿಸಬೇಕು. ಈಗ ನಮ್ಮ ದೇಶದಲ್ಲಿರುವ ಕೈಗಾರಿಕೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಬೇಕೆಂದಿದ್ದಾರೆ. ನೌಕರರನ್ನು ಸರ್ಕಾರಿ ಕೆಲಸದಿಂದ ತೆಗೆಯುತ್ತಿದ್ದಾರೆ. ಇದು ಬಹಳ ಅಪಾಯ ಇದೆ. ಧರ್ಮ ಒಂಟಿಕಾಲಲ್ಲಿ ಓಡಾಡುತ್ತಿದೆ. ಪ್ರಜಾಪ್ರಭುತ್ವ ಒಂದು ಕಾಲಿನಲ್ಲಿ ಕುಂಟುತ್ತಿದೆ ; ಮುಗ್ಗರಿಸುತ್ತಿದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ನಾವು ಜನತೆಯ ಕಣ್ಣೊರೆಸುವುದಕ್ಕೆ ಮಾತನಾಡಿ 25 ರೂಪಾಯಿಗಳನ್ನು ತೆಗೆದುಕೊಂಡು ಹೋಗುವುದಾದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆಂದು ತಿಳಿದುಕೊಂಡು ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಬೇಕು ಎಂದು ಹೇಳಿ ನಾನು ಈ ಬೇಡಿಕೆಗಳನ್ನು ವಿರೋಧಿಸುತ್ತೇನೆ.

† ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ಕಾರ್ಯಕ್ರಮ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಡಿಮ್ಯಾಂಡ್ ನಂಬರ್ 9, 11 ಹಾಗೂ 26ರ ಮೇಲೆ ಈ ದಿನ 4-5 ಗಂಟೆಗಳ ಕಾಲ ಚರ್ಚೆ ಸಾಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿದಂಥಾ ಮಾನ್ಯ ಸದಸ್ಯರನೇಕರು ಈ ಬೇಡಿಕೆಗಳ ಮೇಲೆ ತಮ್ಮ ಪರಿಶೀಲನಾಯುಕ್ತವಾದ ಭಾಷಣಗಳನ್ನು ಮಾಡಿದ್ದಾರೆ. ಇವುಗಳಲ್ಲಿರತಕ್ಕ ನ್ಯೂನತೆಗಳ ವಿಚಾರವಾಗಿ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಹಲವು ಸದಸ್ಯರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಈ ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರಕ್ಕೆ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಂಥಾ ಹಾಗೂ ರಚನಾತ್ಮಕ ವಾದ ಸಲಹೆಗಳನ್ನು ಕೊಟ್ಟಂತಹ ಮಾನ್ಯ ಮಿತ್ರರೆಲ್ಲರಿಗೂ ಕೂಡ ನಾನು ಬಹಳ ಕೃತಜ್ಞನಾಗಿ ದ್ದೇನೆ. ಕೆಲವು ಮಾನ್ಯ ಸದಸ್ಯರು ಈ ಚರ್ಚೆಯ ಮೇಲೆ ಭಾಷಣ ಮಾಡುತ್ತಾ ಬಹಳ ಉಗ್ರವಾಗಿ ಟೀಕೆ ಮಾಡಿದ್ದಾರೆ. ನಾನು ಅವರಿಗೂ ಕೃತಜ್ಞನಾಗಿದ್ದೇನೆ. ಇಲ್ಲಿ ಉಗ್ರವಾಗಿ ಟೀಕೆ ಮಾಡಿದಂತಹ ಸದಸ್ಯರು ನಮಗೆ ಬಹಳ ಸಹಕಾರಿಯಾಗಿದ್ದಾರೆ ಎಂದು ನನ್ನ ಭಾವನೆ. ನಮ್ಮಲ್ಲಿರತಕ್ಕಂಥ ದೋಷಗಳು ಏನಿವೆ ಎಂಬುದನ್ನು ಅವರು ಎತ್ತಿ ಹಿಡಿಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಅದರಿಂದ ಬಹಳ ಪ್ರಯೋಜನವಾಗುತ್ತದೆ. ಬಹುಶಃ ನನಗೆ ಇರತಕ್ಕಂಥ ಅವಧಿಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತಹ ಎಲ್ಲಾ ವಿಚಾರಗಳಿಗೂ ಕೂಡ ಉತ್ತರ ಕೊಡುವುದಕ್ಕೆ ಸಾಧ್ಯವಾಗದೇ ಹೋಗಬಹುದು. ಹಾಗೆ ಸಾಧ್ಯವಾಗದಂತಹ ಪಕ್ಷದಲ್ಲಿ ಮಾನ್ಯ ಸದಸ್ಯರು ಹೇಳಿದಂತಹ ವಿಚಾರ ವನ್ನು ಉಪೇಕ್ಷೆ ಮಾಡಿದೆ ಎಂದು ಹೇಳಿ ಅಥವಾ ಅದಕ್ಕೆ ಗಮನ ಕೊಡುವುದಿಲ್ಲ ಎಂದು ಭಾವನೆ ಮಾಡಬಾರದು.

5-00 P.M.

ಈ ಸಭೆಯಲ್ಲಿ ನನಗೆ ಯಾವುದು ಮುಖ್ಯವಾದ ಅಂಶವೆಂದು ಕಾಣುತ್ತದೆ, ಆ ವಿಚಾರಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಉಳಿದಂತಹ ಅಂಶಗಳನ್ನು ನಂತರದಲ್ಲಿ ಪರಿಶೀಲನೆ ಮಾಡಿ ಅದರ ಮೇಲೆ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ, ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ನಾನು ಕೊಡುತ್ತೇನೆ. ಈ ಚರ್ಚೆಗೆ ಉತ್ತರ ಕೊಡುವಾಗ ಪ್ರಥಮವಾಗಿ ಮಾನ್ಯ ಸ್ನೇಹಿತರಾದಂತಹ ಶ್ರೀಮಾನ್ ಗೋಪಾಲಗೌಡರು ಪ್ರಸ್ತಾಪ ಮಾಡಿದಂತಹ ಮೇಲ್ಮನೆಯ ರದ್ದಿನ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಮೈಸೂರು ದೇಶದಲ್ಲಿ ಬಹ ವರ್ಷಗಳಿಂದಲೂ ಈ ಎರಡು ಸದನಗಳು ಇವೆ. ಅದರ ಹಕ್ಕು ಎಷ್ಟು ಇದೆಯೋ, ಅದು ಬೇರೆ ಮಾತು. ಆದರೆ ನನಗೆ ತಿಳಿದ ಹಾಗೆ ಸುಮಾರು 60 ವರ್ಷಗಳಿಗಿಂತಲೂ ಮೇಲ್ಪಟ್ಟು ನಮ್ಮ ರಾಜ್ಯ ದಲ್ಲಿ ಈ ಎರಡು ಸದನಗಳು ನಡಕೊಂಡು ಬಂದಿವೆ. ಮೇಲ್ಮನೆಯ ಉಪಯುಕ್ತತೆಯ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಅದು ಸ್ವಲ್ಪ ವಿವಾದಾಸ್ಪದವಾದುದು. ಈ ಮೇಲ್ಮನೆಯನ್ನು ರದ್ದು ಮಾಡಬೇಕಾದ ಅಭಿಪ್ರಾಯ ಕೂಡ ಹಲವು ಕಡೆಗಳಲ್ಲಿ ಬೆಳೆಯುತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಮೇಲ್ಮನೆಯನ್ನು ರದ್ದು ಮಾಡಿದ್ದಾರೆ, ಪಶ್ಚಿಮ ಬಂಗಾಳದಲ್ಲಿ ರದ್ದು ಮಾಡಿದ್ದಾರೆ. ಪಂಜಾಬಿನಲ್ಲಿ ರದ್ದು ಮಾಡಿದ್ದಾರೆ. ಅದಕ್ಕಿಂತ ಹಿಂದೆ ಮೇಲ್ಮನೆ ಕೆಲವು ರಾಜ್ಯ ಗಳಲ್ಲಿ ಇರಲಿಲ್ಲ. ಈ ಸಭೆಯಲ್ಲಿ ಒಬ್ಬ ಸದಸ್ಯರು ಹೇಳಿದರು, ತಮಿಳ್ನಾಡಿನಲ್ಲಿ ರದ್ದು ಮಾಡಿದ್ದಾರೆಂದು, ಆದರೆ ಅಲ್ಲಿ ರದ್ದು ಮಾಡಿಲ್ಲ. ಮೇಲ್ಮನೆ ಒಳ್ಳೆಯ ಕಾನೂನು ಮಾಡುವ ದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿದೆ. ಅದು ನನ್ನ ಅಭಿಪ್ರಾಯ. ನಮ್ಮ ರಾಜ್ಯದಲ್ಲಿ ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಮೇಲ್ಮನೆ ಉಳಿದುಕೊಳ್ಳುವುದು ಒಳ್ಳೆಯದು. ಆದರೆ ಮೇಲ್ಮನೆಗೆ ಬರತಕ್ಕ ಸದಸ್ಯರ ಪೈಕಿ ನಾಮಕರಣ ಮಾಡಿದ ಸದಸ್ಯರ ಮೇಲೆ ಮಾತ್ರ ಸರ್ಕಾರದ ಹತೋಟಿ ಇರುತ್ತದೆ ವಿನಹ ಬಾಕಿ ಯವರಮೇಲೆ ಸರ್ಕಾರದ ಕೈವಾಡ ಏನೂ ಇರುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ತಾವು ಅಲ್ಲಿಗೆ ಹೋಗಿ ಭಾಷಣ ಮಾಡಬೇಕು, ಇಲ್ಲಿ ಬರಬೇಕು ಭಾಷಣ ಮಾಡಬೇಕು.........

ಶ್ರೀ ಕೆ. ಪುಟ್ಟಸ್ವಾಮಿ.—ಅವರು ತೋರಿಸಿದ ಸಹಾನುಭೂತಿಗೆ ನಾನು ಕೃತಜ್ಞನಾಗಿದ್ದೇನೆ. ಆದರೆ ಯಾವ ಕಾಲದಲ್ಲಿಯೂ ನಾವು ಇರುವುದಿಲ್ಲ. ಬೇರೆ ಪಕ್ಷದವರೂ ಕೂಡ ಇಲ್ಲಿ ಬರಬಹುದು. ಆ ಕಾಲದಲ್ಲಿ ಅವರು ಏನು ಅಭಿಪ್ರಾಯಪಡುತ್ತಾರೆ, ಹಾಗೆ ಮಾಡಬಹುದು. ಆದರೆ ಈಗ ಮೇಲ್ಮನೆ ಯನ್ನು ರದ್ದು ಮಾಡುವುದಕ್ಕೆ ಸಕಾಲವಲ್ಲ. ಈಗಾಗಲೇ ಒಂದು ನಿರ್ಣಯವನ್ನು ನಾವು ಅಧ್ಯಕ್ಷರ ಆಫೀಸಿಗೆ ಕಳಿಸಿಕೊಟ್ಟಿದ್ದೇವೆ. ಅದು ಮೇಲ್ಮನೆಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವುದರ ಬಗ್ಗೆ

ಅದು ಮುಂದೆ ಸಭೆಯಲ್ಲಿ ಚರ್ಚೆಗೆ ಬರುತ್ತದೆ. ಚರ್ಚೆಗೆ ಬಂದಂತಹ ಕಾಲದಲ್ಲಿ ಇದರ ಬಗ್ಗೆ ಹೆಚ್ಚಿನ ಮಟ್ಟದ ಚರ್ಚೆಯಾಗುತ್ತದೆ. ಆಗ ಈ ಸಭೆ ಏನು ತೀರ್ಮಾನ ಮಾಡುತ್ತದೆ ಎಂಬುದನ್ನು ನಾವು ಕಾದು ನೋಡಬಹುದು, ಮತ್ತು ಶ್ರೀಮಾನ್ ಸಿದ್ದವೀರಪ್ಪನವರು ಸಭೆಯ ಕಾರ್ಯ ಕಲಾಪಗಳು ನಡೆಯುತ್ತಾ ಇರುವ ವಿಚಾರದಲ್ಲಿ ಪ್ರಸ್ತಾಪ ಮಾಡಿದರು. ಅವರು, ಸಭೆಯ ಕಾರ್ಯಕಲಾಪಗಳನ್ನು ಅಷ್ಟಾಗಿ ತೀವ್ರತೆಯಿಂದ ಗಮನಿಸುತ್ತಾ ಇಲ್ಲ ಮತ್ತು ಸಭೆಯ ಕಾರ್ಯ ಕಲಾಪಗಳಿಗೆ ಎಷ್ಟು ಕಾಲ ಅವಶ್ಯಕವಾಗಿದೆಯೋ, ಅಷ್ಟು ಕಾಲವನ್ನು ಕೊಡುತ್ತಾ ಇಲ್ಲ, ಮತ್ತು ಸಭೆ ಕರೆಯುವುದು ಏನೋ ಶಾಸಕಾಂಗದ ರಿಕ್ವೈರ್‌ಮೆಂಟ್ಸ್ ಪೂರೈಸುವುದಕ್ಕೋಸ್ಕರ, 6 ತಿಂಗಳ ಕೊನೆಯಲ್ಲಿ ಕರೆಯುತ್ತಿದ್ದಾರೆಂದು ಹೇಳಿದರು. ಮಾನ್ಯ ಸಿದ್ದವೀರಪ್ಪನವರು 67 ರಿಂದ ಈಚೆಗೆ ನಡೆದ ಸಭೆಯ ಕಾರ್ಯಕಲಾಪಗಳನ್ನು ಹೇಗೆ ನಡೆದಿದೆ ಎಂದು ಪರಿಶೀಲನೆ ಮಾಡಿದರೆ ಅವರಿಗೆ ಗೊತ್ತಾಗುತ್ತದೆ—ಹೇಗೆ ನಡೆದಿದೆ ಎಂದು. 6 ತಿಂಗಳು ಮುಗಿಯುತ್ತದೆ, ಮತ್ತು ರಾಜ್ಯಾಂಗದ ಶಾಸನವನ್ನು ಉಲ್ಲಂಘಿಸದೆ ಇರುವುದಕ್ಕೆ ಸಭೆ ಕರೆದಿದೆ ಎಂದು ಆಗಲಾರದು. ಸಭೆ ನಾಲ್ಕು ತಿಂಗಳ ಅವಧಿಯಲ್ಲೂ ಸೇರಿವೆ, ಬಹುಕಾಲ ಚರ್ಚೆ ನಡೆದಿದೆ. ಮತ್ತು ನಡೆಯತಕ್ಕ ಕಾರ್ಯ ಕಲಾಪಗಳ ವಿಚಾರದಲ್ಲಿ ಕಾಲ ಇನ್ನೂ ಹೆಚ್ಚು ಉಪಯೋಗಿಸಿಕೊಳ್ಳಬೇಕೆನ್ನುವ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಅದು ನಮ್ಮ ಕೈಯಲ್ಲಿ ಇರುವುದಿಲ್ಲ. ಸಭಾಧ್ಯಕ್ಷರು ಒಳ್ಳೆಯ ಮೆಹನತ್ತಿನಿಂದ ಈ ಸಭೆಯ ಕಾಲವನ್ನು ಎಷ್ಟು ಸದುಪಯೋಗಪಡಿಸಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಅಷ್ಟು ಸದುಪಯೋಗಪಡಿಸಿಕೊಳ್ಳಲು ಪ್ರಯತ್ನ ಮಾಡಿದ್ದಾರೆಂಬುದನ್ನು ನಾನು ಹೇಳುವುದಕ್ಕೆ ಸಂತೋಷಪಡುತ್ತೇನೆ. ಮತ್ತು ಸಿದ್ದವೀರಪ್ಪನವರು ಹೇಳಿದಂತಹ ವಿಚಾರವನ್ನು ನಾನು ಅಲ್ಲಗಳೆಯುವುದಿಲ್ಲ. ಈಗ ಏನು ಸಾಧಿಸಿದ್ದೇವೆ, ಅದಕ್ಕಿಂತಲೂ ಉತ್ತಮವಾಗಿ ಮಾಡುವುದಕ್ಕೆ ಅವಕಾಶ ಉಂಟು. ಪ್ರಜಾಪ್ರಭುತ್ವದ ಮೂಲವಾದ ಈ ಸಭೆ ತನ್ನ ಕಾರ್ಯ ಕಲಾಪಗಳನ್ನು ಇನ್ನೂ ಉತ್ತಮವಾಗಿ ನಡೆಸುವುದಕ್ಕೆ ಅವಕಾಶ ಇದೆ. ಅದಕ್ಕೆ ಹೆಚ್ಚು ಪ್ರಯತ್ನ ಪಡಬೇಕೆನ್ನುವವರಲ್ಲಿ ನಾನೂ ಒಬ್ಬ. ಮತ್ತು ಸಭೆಯ ಕಾರ್ಯಕಲಾಪಗಳಿಗೆ ಸಾಕಷ್ಟು ಕಾಲ ಒದಗಿಸಿಕೊಟ್ಟಿಲ್ಲವೆಂದು ಹೇಳಿದರು. ನಾನು ಹೇಳುತ್ತೇನೆ, ನಮ್ಮ ದೇಶದಲ್ಲಿರತಕ್ಕ ಎಲ್ಲಾ ರಾಜ್ಯಗಳಿಗಿಂತಲೂ ಹೆಚ್ಚು ಕಾಲಾವಕಾಶ ಕೊಟ್ಟಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ಆದರೆ ಯಾವ ರಾಜ್ಯಕ್ಕಿಂತಲೂ ಕಡಿಮೆಯಲ್ಲ, ಹೆಚ್ಚು ಅವಕಾಶ ಮಾಡಿದ್ದೇವೆಂದು ಹೇಳುತ್ತೇನೆ. ಬಹುಶಃ ಬೇರೆ ರಾಜ್ಯಗಳು ನಮಗಿಂತ ಮುಂಚೆ ಬಜೆಟನ್ನು ಮುಗಿಸಿದವುಗಳು ಕೇವಲ ಒಂದೆರಡು ಇರಬಹುದು. ಅನೇಕ ರಾಜ್ಯಗಳವರು ಮಾರ್ಚಿ ತಿಂಗಳಲ್ಲಿ ಬಜೆಟನ್ನು ಮಂಡಿಸಿದ್ದಾರೆ. ನಾವು ಕಳೆವ ವರ್ಷದಿಂದೀಚೆಗೆ ಫೆಬ್ರುವರಿ 25 ರೊಳಗೆ ಬಜೆಟನ್ನು ಮಂಡಿಸಿ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೇವೆ. ಮಧ್ಯೆ ಯಾವುದೋ ಬೇರೆ ಬೇರೆ ಕಾರ್ಯಕಲಾಪಗಳು ಬರುವುದರಿಂದ ಕಾಲ ಸ್ವಲ್ಪಮಟ್ಟಿಗೆ ಮೊಟಕಾಗುತ್ತದೆ. ಇನ್ನೂ ಹೆಚ್ಚಿನ ಅವಕಾಶ ಒದಗಿಸಿಕೊಡಬೇಕೆಂಬುದು ನನ್ನ ಅಭಿಪ್ರಾಯ. ಮುಂದೆ ಇದಕ್ಕಿಂತಲೂ ಹೆಚ್ಚಿನ ಅವಕಾಶವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಮತ್ತು ಶ್ರೀಮಾನ್ ನಾಗಪ್ಪನವರು ಡ್ರಾಫ್ಟಿಂಗ್ ಇಲಾಖೆ ವಿಚಾರ ಹೇಳಿದರು. ಡ್ರಾಫ್ಟಿಂಗ್ ಇನ್ನೂ ಬಲಿಷ್ಠವಾಗಿರಬೇಕು, ಅಲ್ಲಿ ಒಳ್ಳೆಯ ಅಧಿಕಾರಿಗಳು ಇರಬೇಕು ಮುಂದೆ ಬರತಕ್ಕ ಮಸೂದೆಗಳು ಇನ್ನೂ ಉತ್ತಮವಾಗಿ ರಚನೆಯಾಗಬೇಕೆಂದು ಹೇಳಿದರು. ಆ ವಿಚಾರದಲ್ಲಿ ಕೂಡ ಅದನ್ನು ಉತ್ತಮಪಡಿಸುವುದಕ್ಕೆ ಅವಕಾಶ ಇದೆ ಎಂದು ಹೇಳುತ್ತೇನೆ. ನನ್ನ ಒಂದು ಅಭಿಪ್ರಾಯ ಹೇಳುವುದಾದರೆ, ನಮ್ಮ ಈ ಸಭೆಯಿಂದ ಒಪ್ಪಿಗೆಯಾದ ಅನೇಕ ಮಸೂದೆಗಳು ಶ್ರೇಷ್ಠ ನ್ಯಾಯಾಲಯಗಳ ಮುಂದೆ, ಸುಪ್ರೀಂ ಕೋರ್ಟಿನ ಮುಂದೆ ಹೋದಂತಹ ಸಮಯದಲ್ಲಿ ಡ್ರಾಫ್ಟಿಂಗ್ ತಪ್ಪಾಗಿ ಯಾವ ಮಸೂದೆಯೂ, ಯಾವ ಕಾನೂನು ರದ್ದಾದುದು ಯಾವುದೂ ಇಲ್ಲ. ಒಂದು ಸಂದರ್ಭ ಬಿಟ್ಟರೆ, ಯಾವ ಸಂದರ್ಭದಲ್ಲಿಯೂ ಸುಪ್ರೀಂ ಕೋರ್ಟು ಕೂಡ ನಮ್ಮ ಡ್ರಾಫ್ಟಿಂಗ್ ವಿಚಾರದಲ್ಲಿ ಯಾವ ಟೀಕೆಯನ್ನೂ ಮಾಡಿಲ್ಲ. ಇದು ಸಾಮಾನ್ಯವಾದಂತಹ ಟೀಕೆಯೆಂದು ನಾನು ಭಾವನೆ ಮಾಡಿಕೊಂಡಿರುತ್ತೇನೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಡ್ರಾಫ್ಟಿಂಗ್ ಡಿಪಾರ್ಟ್‌ಮೆಂಟ್ ಸಾಕಷ್ಟು ಬಲಿಷ್ಠವಾಗಿದೆ, ಮತ್ತು ನಮ್ಮಲ್ಲಿ ಆಗತಕ್ಕಂತಹ ಕಾನೂನುಗಳು ಏನಿವೆ, ಅವುಗಳು ಸರಿಯಾದಂತಹ ರೀತಿಯಲ್ಲಿ ಬರೆದವುಗಳು ಆಗಿವೆ. ಮತ್ತೆ ಅವು ಈ ಸಭೆಯ ಮುಂದೆ ಬಂದಾಗ ಅನೇಕವೇಳೆ ನಾವು ಕೊಟ್ಟಂಥ ಕರಡು ಮಸೂದೆ ಹೆಚ್ಚು ಮಾರ್ಪಾಡು ಆಗದೆ ಈ ಸಭೆ ಒಪ್ಪುತ್ತಾ ಇರುವುದೇ ಸಾಕ್ಷಿಯಾಗಿದೆ. ಅನೇಕವೇಳೆ ಯಾವ ಅಭಿಪ್ರಾಯವನ್ನು ಕರಡುಮಸೂದೆ ಸೂಚಿಸುತ್ತದೋ ಆ ಅಭಿಪ್ರಾಯವನ್ನು ಒಪ್ಪದೆ ಬದಲಾಯಿಸಿದ್ದರೆ, ಆಗ ಕರಡು ಮಸೂದೆಯ ರಚನೆಯ ಕ್ರಮ ಸರಿಯಾಗಿಲ್ಲವೆಂದು ಹೇಳಿದಂಥ ಸಂದರ್ಭಗಳು ಬಹಳ ವಿರಳ.

ಶ್ರೀ ಎಸ್. ಗೋಪಾಲಗೌಡ.—ಇನ್ನು ಡ್ರಾಫ್ಟಿಂಗ್‌ನಲ್ಲಿ ನಮ್ಮವರು ಬಹಳ ತಜ್ಞರು, ಬಹಳ ತಿಳಿದವರು ಇದ್ದಾರೆ ಎನ್ನುವ ಮಾತನ್ನು ಒಪ್ಪಿದರೂ ಕೂಡ, ಮೊನ್ನೆತಾನೇ ಒಂದು ಕಡೆ ಒಂದು ಕಲಂನಲ್ಲಿ ಏತಕ್ಕೆ ಇದನ್ನು ಈ ರೀತಿ ಹಾಕಿದ್ದೀರಿ ಎಂದು ಕೇಳಿದ್ದಕ್ಕೆ, ಅದು ಬೊಂಬಾಯಿ ಕಾನೂನಿನಲ್ಲಿದೆ, ಮದ್ರಾಸ್ ಕಾನೂನಿನಲ್ಲಿದೆ ಎಂಬುದಾಗಿ ಹೇಳಿದ್ದನ್ನು ನಾನು ಕೇಳಿದ್ದೇನೆ, ಅವನ್ನು ಇಂಗ್ಲೀಷ್‌ನಲ್ಲಿ ಬರೆದಿರುವುದರಿಂದ ಅನಾಹುತಗಳು ಬಹಳವಾಗುತ್ತವೆ. (ಮ)ನೆ ಮಾರಾಟ ಮತ್ತು ಜಮೀನು ಮಾರಾಟ ಎಂಬುದನ್ನೇ ಇಂಗ್ಲಿಷ್‌ನಲ್ಲಿ ತರ್ಜುಮೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ನಾವು ಜಡ್ಜ್‌ಗಳ ಹತ್ತಿರ ಮಾತನಾಡಿದಾಗ ನಿಮಗೇನು ಬರುತ್ತದೆ, ನಿಮ್ಮ ಕಾನೂನು, ನಿಮಗೆ ಅರ್ಥವಾಗುತ್ತದೆ, ನೀವು ಅಸೆಂಬ್ಲಿ ಮೆಂಬರುಗಳು ಏನು ಕಾನೂನು ಬರೆಯುತ್ತೀರೋ? ಎಷ್ಟೋ ಹೊಡೆದು ಹಾಕಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ಹೇಳಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರಿಗೆ ಅವರು ಹೇಳಿದ ಹಾಗೆ ನನಗೂ ಹೇಳಿದ್ದಾರೆ. ಅದನ್ನು ಸ್ವಲ್ಪ ತಿದ್ದುಪಡಿ ಮಾಡಿಕೊಟ್ಟರೆ ಕನ್‌ಸಿಡರ್ ಮಾಡಬಹುದು ಎಂದು ಹೇಳಿದರೆ ಅವರು ಉತ್ತರ ಕೊಡುವುದಕ್ಕಾಗಲಿಲ್ಲ. ಕೆಲವರು ನಾನು ವಕೀಲನಲ್ಲ, ಕೋರ್ಟ್ ಮುಂದೆ ಹಾಜರಾಗಿಲ್ಲವೆಂದು ಹೇಳಿದ್ದಾರೆ. ನಾವು ಅದನ್ನು ಓದಿ ಹೇಳಬೇಕು. ಶಾಸನ ಓದಿ ತಿಳಿದುಕೊಳ್ಳಬೇಕಾದರೆ ಹೆಚ್ಚು ಸಮಯ ಬೇಕಾಗುತ್ತದೆ. ನಾವೆಲ್ಲಾ ಓದಿದ ಹಾಗೆ ಓದಿದರೂ ಅವರಿಗೆ ಅರ್ಥವಾಗುವುದಿಲ್ಲ. ಒಂದಲ್ಲ, ಹತ್ತು ಸಾರಿ ಓದಬೇಕು. ಓದಿದ ಹಾಗೆಲ್ಲಾ ಬೇರೆಬೇರೆ ರೀತಿಯಲ್ಲಿ ಅರ್ಥವಾಗುವ ಹಾಗೆ ಆಗುತ್ತದೆಂದು ಅನೇಕವೇಳೆ ಟೀಕೆಮಾಡಿದ್ದೂ ಉಂಟು. ಕೆಲವು ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಏನು ಅಭಿಪ್ರಾಯವಿದೆಯೆಂದರೆ, ಅವರು ಹೇಳಿದ್ದೇ ಸರಿ, ನಾವು ಈ ಸಭೆಯಲ್ಲಿ ಮಾಡಿದೆಲ್ಲಾ ತಪ್ಪು ಎಂದು ಹೇಳುತ್ತಾರೆ. ಆದರೆ ನಾನು ಡ್ರಾಫ್ಟಿಂಗ್ ವಿಚಾರದಲ್ಲಿ ಪರಿಣತರು ಇದ್ದೇವೆ, ನಾವು ಮಾಡಿದ್ದೆಲ್ಲಾ ಸರಿ, ಅದರಲ್ಲಿ ಏನೂ ತಪ್ಪಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಸುಪ್ರೀಂ ಕೋರ್ಟಿನಲ್ಲಿ ಒಂದುಸಲ ತೀರ್ಮಾನವಾದಂಥ ತೀರ್ಪಿನ ವಿಚಾರ ಕೆಲವು ಕಾಲದ ಮೇಲೆ ಅಲ್ಲಿಗೆ ಬಂದರೆ ಅದರಮೇಲೆ ಬೇರೆ ಅಭಿಪ್ರಾಯ ಬರುವುದಕ್ಕೂ ಸಾಧ್ಯವಿದೆ. ಅಂತಹ ಸಂದರ್ಭಗಳು ಅನೇಕವಿವೆ. ನನ್ನ ಅಭಿಪ್ರಾಯದಲ್ಲಿ ಈ ಡ್ರಾಫ್ಟಿಂಗ್ ಇವತ್ತಿನವರೆಗೂ ಅತೃಪ್ತಿಕರವಾಗಿಲ್ಲ, ತೃಪ್ತಿಕರವಾಗಿದೆ. ಬೇರೆಬೇರೆ ರಾಜ್ಯಗಳಲ್ಲಿರತಕ್ಕ ಕಾನೂನುಗಳನ್ನು ನೋಡಿದರೆ ನಮ್ಮ ಕಾನೂನು ನಿಜವಾಗಿ ಸರಿಯಾಗಿದೆಯೆಂದು ನನ್ನ ಭಾವನೆ. ಈ ಕಾನೂನುಗಳು ಮದ್ರಾಸ್‌ನಲ್ಲಿವೆ, ಬೊಂಬಾಯಿನಲ್ಲಿವೆ, ಎಂಬುದಾಗಿ ಹೇಳುತ್ತಾರೆಂದು ಮಾನ್ಯ ಶ್ರೀ ಗೋಪಾಲಗೌಡರು ಹೇಳಿದರು. ಇದು ಡ್ರಾಫ್ಟಿಂಗ್ ವಿಚಾರವಲ್ಲ, ರಚನಾಕ್ರಮವಲ್ಲ, ಒಂದು ಶಾಸನವನ್ನು ಮಾಡಬೇಕಾದರೆ ಅದರ ಅವಶ್ಯಕತೆಗಳ ವಿಚಾರವಾಗಿ ಪ್ರಸ್ತಾಪಮಾಡುತ್ತೇವೆಯೇ ಹೊರತು ರಚನಾಕ್ರಮ ವಿಚಾರಮಾಡುವುದಲ್ಲ. ಯಾವುದೇ ವಿಷಯ ಕೊಟ್ಟರೂ ರಚನಾಕ್ರಮವನ್ನು ನಮ್ಮ ಅಧಿಕಾರಿಗಳು ಚೆನ್ನಾಗಿ ಮಾಡಬಲ್ಲರು ಎಂಬುದಾಗಿ ಹೇಳುತ್ತೇನೆ. ಇನ್ನು ಒಬ್ಬಿಬ್ಬರು ಹೈಕೋರ್ಟ್ ವಿಚಾರವಾಗಿ ಪ್ರಸ್ತಾಪಮಾಡಿದರು. ಹೈಕೋರ್ಟಿನಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡುವ ವಿಚಾರವಾಗಿ ಪ್ರಸ್ತಾಪಮಾಡಿದರು. ಹೈಕೋರ್ಟಿನಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡುವವರು ರಾಷ್ಟ್ರಾಧ್ಯಕ್ಷರು.

ಶ್ರೀ ಜಿ. ಚಂದ್ರಕಾಂತ್.—ತಾವು ರೆಕಮಂಡೇಷನ್ ಮಾಡುವುದಿಲ್ಲವೇ?

ಶ್ರೀ ಕೆ. ಪುಟ್ಟಸ್ವಾಮಿ.—ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡುವುದಿಲ್ಲ. ಅವರನ್ನು ನೇಮಕಮಾಡುವ ಅಧಿಕಾರ ಇರುವುದು ರಾಷ್ಟ್ರಾಧ್ಯಕ್ಷರಿಗೆ ಮಾತ್ರ.

ಶ್ರೀ ಎಸ್. ಗೋಪಾಲಗೌಡ.—ತಾವು ಪ್ಯಾನಲ್ಲನ್ನು ಕಳುಹಿಸುತ್ತೀರಿ. ರಾಜ್ಯ ಸರ್ಕಾರ ಪ್ಯಾನಲ್ಲನ್ನು ಕಳುಹಿಸುವುದಕ್ಕೆ ಅಧಿಕಾರವಿದೆ. ರಾಷ್ಟ್ರಾಧ್ಯಕ್ಷರು ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರ ಜೊತೆಯಲ್ಲಿ ಸಮಾಲೋಚನೆ ಮಾಡಿ ನೇಮಕ ಮಾಡುತ್ತಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಯಾರನ್ನು?

ಶ್ರೀ ಕೆ. ಪುಟ್ಟಸ್ವಾಮಿ.—ಹೈಕೋರ್ಟ್ ಜಡ್ಜ್‌ಗಳನ್ನು.

Sri H. SIDDAVEERAPPA.—The Chief Minister and the Chief Justice will sit together and send the name.

Sri K. PUTTASWAMY.—That is only sending the name. That is not binding. ಇನ್ನು ಹೈಕೋರ್ಟಿನಲ್ಲಿ ಮೊಕದ್ದಮೆಗಳು ತೀರ್ಮಾನವಾಗುವ ಸಂಖ್ಯೆಯನ್ನು ನೋಡಿದರೆ ಬೇರೆ ಬೇರೆ ಹೈಕೋರ್ಟ್‌ಗಳ ಸಂಖ್ಯೆಗಿಂತ ದಾಮಾಷಾ ಪ್ರಕಾರ ಏನೂ ಕಡಿಮೆ ಇಲ್ಲ.

ಹೈಕೋರ್ಟ್ ಮುಖ್ಯ ನ್ಯಾಯಾಧೀಶರು ಸೇರಿ ಪ್ರತಿಯೊಬ್ಬ ನ್ಯಾಯಾಧೀಶರಿಗೂ ತಲಾ 650 ರಂತೆ ಕೇಸುಗಳನ್ನು ತೀರ್ಮಾನಮಾಡಬೇಕೆಂದು ತೀರ್ಮಾನಮಾಡಿದ್ದೇವೆ. ಆ ಸಂಖ್ಯೆ ನೋಡಿದರೆ ನಮ್ಮ ರಾಜ್ಯದ ಹೈಕೋರ್ಟಿನಲ್ಲಿ ಇತರ ಹೈಕೋರ್ಟಿಗಿಂತಲೂ ಹೆಚ್ಚಿಗೆ ತೀರ್ಮಾನವಾಗುತ್ತವೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದಕ್ಕೆ ಕಾರಣ ನೀವು ಸರಿಯಾಗಿ ಆಡಳಿತ ಮಾಡಿದ್ದರೆ ಅಷ್ಟು ಕೇಸುಗಳು ಕೋರ್ಟಿಗೆ ಬರುತ್ತಿರಲಿಲ್ಲ. ಅಲ್ಲಿನ ನೂರಾರು ಕೇಸುಗಳು ನಿಮ್ಮ ಮೇಲೆಯೇ ಇರುವುದು.

ಶ್ರೀ ಕೆ. ಪುಟ್ಟಸ್ವಾಮಿ.—ಯಾವಾಗಲೂ ಮಾನ್ಯ ಶ್ರೀ ಸಿದ್ಧವೀರಪ್ಪನವರು ಆಡುವ ಪಲ್ಲವಿಯೇ ಅದು. ನಾವೇ ಮಾಡಿರುವುದು ಎಂದು ಹೇಳಿದರೂ, ಅನೇಕ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಈ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೂ ನಾವು ಮಾಡಿರುವುದು ಸರಿಯಾಗಿಲ್ಲವೆಂದು ಹೇಳುವ ಅಧಿಕಾರ ಇದೆ. ಉದಾಹರಣೆಗೆ ಹೇಳುವುದಾದರೆ ವ್ಯವಸಾಯಗಾರರ ಋಣಪರಿಹಾರ ಕಾನೂನನ್ನು ತೆಗೆದುಕೊಳ್ಳೋಣ. ನಾನು ತಿಳಿಯುತ್ತೇನೆ, ಈ ಸಭೆ ಋಣ ಪರಿಹಾರ ಕಾನೂನಲ್ಲಿರತಕ್ಕ ನೀತಿ ವಿಚಾರವಾಗಿ ಒಮ್ಮತ ಅಭಿಪ್ರಾಯವನ್ನು ಪಟ್ಟಿದೆ. ಆದರೆ, ನಮ್ಮ ಶ್ರೇಷ್ಠ ನ್ಯಾಯಾಲಯ ಅವರ ಮೊಕದ್ದಮೆಗಳನ್ನು ಕೇಳಿ, ನಮ್ಮ ಕಾನೂನು ಸರಿಯಾಗಿಲ್ಲವೆಂದು ಮಾಡಿದ್ದಾರೆ. ಅದು ಸುಪ್ರೀಂ ಕೋರ್ಟ್ ಮುಂದೆ ಇದೆ. ಆದ್ದರಿಂದ ನಾನು ಆ ವಿಚಾರದಲ್ಲಿ ಈಗ ಪ್ರಸ್ತಾಪಮಾಡುವುದಿಲ್ಲ. ಈ ಒಂದೇ ಒಂದು ಶಾಸನದ ಮೇಲೆ 1520 ರಿಟ್ ಪಿಟಿಷನ್ಸ್ ಹೋಗಿವೆ ಅದಕ್ಕೆ ಮಾನ್ಯ ಶ್ರೀ ಸಿದ್ಧವೀರಪ್ಪನವರು ಬೇಕಾದಷ್ಟು ರಿಟ್ ಪಿಟಿಷನ್ಸ್ ಇವೆಯೆಂದು ಹೇಳಿದರು.

ಶ್ರೀ ಎಚ್. ಸಿದ್ಧವೀರಪ್ಪ.—ಮುಕ್ಕಾಲುವಾಸಿ ಎಲ್ಲಾ ಸರ್ವಿಸ್ ಮ್ಯಾಟರ್ಸ್‌ಗೆ ಸಂಬಂಧಪಟ್ಟುದೇ ರಿಟ್ ಇರುವುದು. Let them give statistical data. 90 per cent of the writ petitions are only service matters.

ಶ್ರೀ ಕೆ. ಪುಟ್ಟಸ್ವಾಮಿ.—ಮೊನ್ನೆತಾನೇ ಸರ್ವಿಸ್ ಮ್ಯಾಟರ್ಸ್‌ನಲ್ಲಿ ಎಷ್ಟು ರಿಟ್ ಪಿಟಿಷನ್ಸ್ ಇವೆ, ಬೇರೆ ಬೇರೆ ರಿಟ್ ಪಿಟಿಷನ್ಸ್ ಎಷ್ಟಿವೆಯೆಂಬುದನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅದು ಸೇಕಡ 90ರಷ್ಟು ಇಲ್ಲ. ಸೇಕಡ 40 ಭಾಗ ಮಾತ್ರ ಸರ್ವಿಸ್ ಮ್ಯಾಟರ್ಸ್‌ಗೆ ಸಂಬಂಧಪಟ್ಟುದು ಆಗಿದೆ. ಮತ್ತೆ ಈ ಸರ್ವಿಸ್ ವಿಚಾರಕ್ಕೆ ಸಂಬಂಧಪಟ್ಟಂತಹ ಈ ರಿಟ್ ಪಿಟಿಷನ್‌ಗಳಿಗೆ ಸರ್ಕಾರವೇ ಹೊಣೆಯೆಂದು ಹೇಳುವುದಕ್ಕಾಗುವುದಿಲ್ಲ. ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಐದು ರಾಜ್ಯಗಳಿಂದ ಕಾನೂನುಗಳು ಇಲ್ಲಿಗೆ ಬಂದಿವೆ. ಅವುಗಳನ್ನು ಸಮನ್ವಯ ಮಾಡಬೇಕಾದರೆ, ಸೀನಿಯಾರಿಟಿಯನ್ನು ನಿರ್ಧಾರಮಾಡಬೇಕಾದರೆ ಅನೇಕ ತೊಂದರೆಗಳು ಬಂದಿವೆ. ಅದಕ್ಕೆ ಅನೇಕ ನಿದರ್ಶನಗಳೂ ಸಹ ಇವೆ. ಹೈಕೋರ್ಟಿನಲ್ಲಿ ಕೊಟ್ಟಂಥ ತೀರ್ಮಾನ ಒಂದಕ್ಕೊಂದಕ್ಕೆ ವಿರೋಧ ತೀರ್ಪುಗಳಾಗಿಯೂ ಇವೆ. ಅದಕ್ಕೆ ಹೈಕೋರ್ಟಿನವರು ತಪ್ಪುಮಾಡಿದ್ದಾರೆಂದು ನಾನು ಹೇಳುವುದಿಲ್ಲ.

ಈ ಸರ್ವಿಸ್‌ಗೆ ಸಂಬಂಧಪಟ್ಟ ವಿಚಾರಗಳು ಸಾಕಷ್ಟು ಇವೆ. ಎಷ್ಟೇ ನಿಸ್ಪೃಹರಾಗಿ ಪ್ರಯತ್ನಮಾಡಿದರೂ ಕೂಡ ಅನೇಕ ಸಂದರ್ಭಗಳಲ್ಲಿ ತಪ್ಪಾಗುತ್ತದೆ. ಅದನ್ನು ಈಗಲೇ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಕೆಲವು ಕಾಲಾನಂತರ ಅದು ನಿವಾರಣೆ ಆಗಬಹುದೆಂದು ಈವೊತ್ತಿಗೂ ಕೂಡ ನನ್ನ ವೈಯಕ್ತಿಕ ಅಭಿಪ್ರಾಯ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಸರ್ವಿಸ್ ಮ್ಯಾಟರ್ಸ್ ಹೈಕೋರ್ಟಿಗೆ ಹೋಗಿ ಈಗಿರುವಂತೆ ತೀರ್ಮಾನವಾಗಬೇಕು ಎಂದು ರಾಜ್ಯಾಂಗದಲ್ಲಿ ಅವಕಾಶ ಇದೆ. ಅದು ಇರುವುದು ಸಾಧುವಾದದ್ದು ಅಲ್ಲ ಎಂಬುದು ನನ್ನ ಅಭಿಪ್ರಾಯ. ಹಾಗೆಂದ ಮಾತ್ರಕ್ಕೆ ಸರಕಾರ ತೀರ್ಮಾನಮಾಡಬೇಕು, ಸರಕಾರ ತೀರ್ಮಾನ ಮಾಡಿದ್ದೇ ಆಖೈರು ಆಗಬೇಕು ಎಂಬ ವಾದವನ್ನು ಮುಂದಿಡುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ತಾವು ಹೇಳಿದ್ದನ್ನು ಒಪ್ಪಿಕೊಂಡರೆ ಮೇರೀದೇವೇಸಿಯಾ ಅವರು ಎನ್.ಜಿ.ಒ. ಸಂಘವನ್ನು ಸಂಘಟನೆ ಮಾಡಿ ಸರಕಾರದ ಮೇಲೆ ಎತ್ತಿಕಟ್ಟುವ ಕೆಲಸ ಮಾಡಿದ್ದಾರೆ ಎಂದು ಚೀಫ್ ಸೆಕ್ರೆಟ್ರಿಯವರು ಅವರನ್ನು ನಿವೃತ್ತಿ ಮಾಡಿದರು. ಕೋರ್ಟು ಇಲ್ಲದಿದ್ದರೆ ನೀವು ಮಾಡಿದ್ದೇ ಸರಿ ಆಗುತ್ತಿತ್ತು ಅಲ್ಲವೇ?

ಶ್ರೀ ಕೆ. ಪುಟ್ಟಸ್ವಾಮಿ.—ಪರಿಹಾರಮಾರ್ಗ ಹೇಳುತ್ತಾ ಇದ್ದೆ. ಹೈಕೋರ್ಟಿಗೆ ಹೋಗುವ ಅವಕಾಶವನ್ನು ತಪ್ಪಿಸಿದರೆ ಸರಕಾರ ತೀರ್ಮಾನ ಮಾಡಿದ್ದೇ ಆಖೈರು ಆಗಬೇಕು ಎಂದು ಹೇಳುತ್ತಾ ಇಲ್ಲ. ನಮ್ಮ ಅಧಿಕಾರಿಗಳು ಸರ್ವಿಸ್ ವಿಚಾರದಲ್ಲಿ ಸಂಬಂಧಪಟ್ಟ ಮೊಕದ್ದಮೆಗಳಿಗೆ ಹೈಕೋರ್ಟಿಗೆ ಹೋಗಿ, ಅನೇಕ ವಕೀಲರ ಮುಂದೆ ಹೋಗಿ ಅವರಿಗೆ ಕೊಡಬೇಕಾದಂಥ ಫೀಸನ್ನು

(ಶ್ರೀ ಕೆ. ಪುಟ್ಟಸ್ವಾಮಿ)

ಕೊಟ್ಟು, ಇನ್ನೂ ಅನೇಕ ವಿಧವಾದಂಥ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಬೇರೆ ಮಾರ್ಗ ವನ್ನು ಪಾರ್ಲಿಮೆಂಟಿನಲ್ಲಿ ಆಲೋಚನೆ ಮಾಡಿ ರಾಜ್ಯಾಂಗ ಶಾಸನ ತಿದ್ದುಪಡಿ ಮಾಡುವ ಮೂಲಕ ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮಲ್ಲಿ ನಿವೃತ್ತರಾದ ಹೈಕೋರ್ಟಿನ ನ್ಯಾಯಾಧೀಶರು ಇರುತ್ತಾರೆ. ಅಂಥವರನ್ನು ಒಳಗೊಂಡ ಟ್ರಿಬ್ಯುನಲ್ ಮಾಡಿದರೆ ಬಹುಶಃ ಸರಕಾರ ಮಾಡಿದಂಥ ಆರ್ಡರ್‌ನಲ್ಲಿ ಯಾರಿಗೆ ಸಮಾಧಾನ ಇಲ್ಲವೋ ಅವರು ಈ ಟ್ರಿಬ್ಯುನಲ್‌ಗೆ ಅರ್ಜಿಗಳನ್ನು ಕಳುಹಿಸಬಹುದು. ಟ್ರಿಬ್ಯುನಲ್ ಸರಕಾರದಲ್ಲಿ ಇರತಕ್ಕ ವಿಶಿಷ್ಟ ರೆಕಾರ್ಡನ್ನು ತರಿಸಿ ಪರಿಶೀಲನೆ ಮಾಡಿ, ಸರಕಾರ ಮಾಡುವುದು ಸರಿಯೋ ತಪ್ಪೋ ಎನ್ನುವ ತೀರ್ಮಾನ ಮಾಡಿದರೆ, ಬಹುಶಃ ಸಾಕಾಗಬಹುದು ಎಂದು ಭಾವನೆಮಾಡುತ್ತೇನೆ. ಈಪೊತ್ತು ಆಗುತ್ತಾ ಇರುವ ರೀತಿ ಯಲ್ಲಿ ನಮ್ಮಲ್ಲಿ ಡೀಮಾರಲೈಜ್ ಆಗುತ್ತಾ ಇದೆ. ಅಧಿಕಾರಿಗಳು ಕೆಲಸಮಾಡುವುದನ್ನು ಬಿಟ್ಟು ಅನೇಕರು ವಕೀಲರ ಆಫೀಸಿನಲ್ಲಿ ಮತ್ತು ಹೈಕೋರ್ಟಿನಲ್ಲಿ ಇರುವ ಸಂದರ್ಭ ಇದೆ. ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಬಹುಶಃ ನಮ್ಮ ರಾಜ್ಯದಲ್ಲಿ ಫಾರೆಸ್ಟ್ ಇಲಾಖೆಯಲ್ಲಿ ಇರತಕ್ಕ ದೊಡ್ಡ ದೊಡ್ಡ ಅಧಿಕಾರಿಗಳು ಎಲ್ಲರೂ ಕೂಡ ಹೈಕೋರ್ಟಿನಲ್ಲಿ ಇರುತ್ತಾರೆ ಎಂದು. ಐ.ಎಫ್.ಎಸ್. ಸೀನಿಯಾರಿಟಿ ಲಿಸ್ಟ್ ನಾವು ಮಾಡಿರುವುದು ಅಲ್ಲ. ಇಂಡಿಯಾ ಸರಕಾರದವರು ಮಾಡಿದ್ದು. ಇಂಡಿಯಾ ಸರಕಾರದವರು ಸಮಿತಿ ನೇಮಕ ಮಾಡಿ ಐ.ಎಫ್.ಎಸ್. ಲಿಸ್ಟ್ ತಯಾರುಮಾಡಿರುವುದರ ಮೇಲೆ ಅತೃಪ್ತಿ ಇದೆ.

Sri H. SIDDAVEERAPPA.—You have been saying every now and then that ours is a federal Constitution. Your Chief Minister is very jealous about his rights. Then why on earth did you agree to enter into the I. F. S.? Have you bartered away the rights of our people?

ಶ್ರೀ ಎಸ್. ಗೋಪಾಲಗೌಡ.—ಸೀನಿಯರಿಟಿ ಲಿಸ್ಟನ್ನು ಫೈನಲ್ ಆಗಿ ತಾವು ತೀರ್ಮಾನ ಮಾಡುವುದಕ್ಕಾಗುವುದಿಲ್ಲವೋ, ಮಾಡಿದ್ದೀರೋ ನನಗೆ ಗೊತ್ತಿಲ್ಲ. ಅದರಲ್ಲಿ ಶರ್ಮ ಎನ್ನುವವರು ಟೀಚರ್ ಆಗಿದ್ದಾಗ ಓದಿದವರು ಕನ್‌ಸರ್‌ವೇಟರ್ ಆಗಬೇಕಾದರೆ, ಶರ್ಮರವರು ಎಲ್ಲಿ ಹೋಗ ಬೇಕು ಎಂದು ಯೋಚನೆಮಾಡಬೇಕಾಗುತ್ತದೆ. ಶಂಕರಪ್ಪ ಎನ್ನುವವರು ಎದೆ ನೋವಿನಿಂದ ತೊಳಲಾಡುತ್ತಿದ್ದಾರೆ. ಅದಕ್ಕೂ ಸರಕಾರವೇ ಕಾರಣವಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ರಾಜ್ಯಸರಕಾರ ಕಾರಣವಲ್ಲ.

ಶ್ರೀ ಎಸ್. ಶಿವಪ್ಪ.—ಅಧಿಕಾರಗಳ ನೇಮಕದ ಬಗ್ಗೆ ಸರಕಾರ ಜವಾಬ್ದಾರಿ ತೆಗೆದುಕೊಳ್ಳದೆ ನಾವು ಕಾರಣರಲ್ಲ, ಬೇರೆಯವರು ಕಾರಣರು ಎಂದರೆ ಅಧಿಕಾರಿಗಳಿಗೆ ನಿರಾಶೆ ಉಂಟು ಮಾಡು ವುದಕ್ಕೆ ಕಾರಣ ನಿಮ್ಮಲ್ಲಿ ಇರತಕ್ಕ ಜಾತೀಯತೆ, ಪ್ರಾದೇಶಿಕತೆ ಎದ್ದು ಕಾಣುತ್ತಿದೆ. ಅಧಿಕಾರಿ ಗಳು ಕೆಲಸಮಾಡುವುದಕ್ಕೆ ತಯಾರಾಗಿಲ್ಲ. ಅದಕ್ಕೆ ನೀವೇ ಕಾರಣ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ಟೇಟ್ ರೀ ಆರ್ಗನೈಸೇಷನ್ ಆಕ್ಟ್ ಪ್ರಕಾರ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ರಾಜ್ಯಸರಕಾರ ಮಾಡಿದ್ದು ಅಲ್ಲ. ಇನ್ನು ಮುಂದಿನ ವಿಚಾರ. ನಾಗಪ್ಪ ನವರು ರಾಯಚೂರು ಜಿಲ್ಲೆಯಲ್ಲಿ ಎರಡು ಕೋರ್ಟಿನ ವಿಚಾರ ಪ್ರಸ್ತಾಪಮಾಡಿದ್ದಾರೆ. ಸಂಬಂಧ ಪಟ್ಟ ಅರ್ಜಿಗಳನ್ನು ಹೈಕೋರ್ಟಿಗೆ ಕಳುಹಿಸಿದ್ದೇವೆ. ಹೈಕೋರ್ಟಿನವರು ಅಂತಹ ಅರ್ಜಿಗಳು ಯಾವುದು ಬಂದರೂ ಒಬ್ಬ ಹೈಕೋರ್ಟಿನ ಜಡ್ಜರನ್ನು ನೇಮಕಮಾಡಿ ವಿಚಾರಣೆಮಾಡುತ್ತಾರೆ. ಅದರಲ್ಲಿ ಸತ್ಯಾಂಶ ಇದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ನಾಗಪ್ಪ.—ಇಂತಹ ಜಡ್ಜುಗಳನ್ನು ಅಪಾಯಿಂಟ್ ಮಾಡುತ್ತೀರಿ ಎಂದು ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ಪ್ರಸ್ತಾಪ ಮಾಡುತ್ತೇನೆ. ಆ ರೀತಿ ತಪ್ಪು ಸಾಬೀತು ಆದ ಸಂದರ್ಭದಲ್ಲಿ ಹೈಕೋರ್ಟಿನ ಶಿಫಾರಸಿನ ಮೇಲೆ ಅಂತಹ ನ್ಯಾಯಾಧೀಶರನ್ನು ಕಡ್ಡಾಯ ವಾಗಿ ನಿವೃತ್ತಿ ಮಾಡಿದ ನಿದರ್ಶನ ಒಂದೆರಡು ಇದೆ. ಅದು ಹೋದ ವರ್ಷ ಆಗಿದೆ. ನಾಗಪ್ಪ ನವರು ನೇಮಕದ ವಿಚಾರವನ್ನು ಪ್ರಸ್ತಾಪಮಾಡಿದರು. ಮುನ್‌ಸೀಫರನ್ನು, ಮ್ಯಾಜಿಸ್ಟ್ರೇಟರನ್ನು ನೇಮಕಮಾಡುವುದು ಸರಕಾರ ಅಲ್ಲ. ಪಬ್ಲಿಕ್ ಸರ್ವಿಸ್ ಕಮೀಷನಿಂದ ಪರೀಕ್ಷೆಮಾಡಿ, ಪರೀಕ್ಷೆ ಯಲ್ಲಿ ಉತ್ತೀರ್ಣರಾದವರನ್ನು ಮಾತ್ರ ಸರಕಾರ ನೇಮಕ ಮಾಡುತ್ತದೆ. ಆದುದರಿಂದ

ಇನ್ನಾದರೂ ನೇಮಕದಲ್ಲಿ ದೋಷ ಇದೆ ಎಂದು ಭಾವನೆ ಮಾಡಬಾರದು. ಯಾರನ್ನಾದರೂ ಕೂಡ ನೇಮಕಮಾಡಿದರೆ, ಆತನು ತನ್ನ ಅಧಿಕಾರವನ್ನು ಮುಂದೆ ದುರುಪಯೋಗ ಮಾಡಬಹುದು ಎಂದು ಮನಗಾಣುವುದು ಕಷ್ಟ. ನೇಮಕ ಮಾಡುವ ಮುಂಚೆ ಅವರ ವಿಚಾರದಲ್ಲಿ ಅನೇಕ ಮಾಹಿತಿ ಗಳನ್ನು ತರಿಸಿಕೊಂಡು ಆ ಮಾಹಿತಿ ಮೇರೆಯೇ ನೇಮಕಮಾಡುವುದು. ಈ ಒಂದು ನೇಮಕ ಮಾಡುವಾಗ ಸರಕಾರ ತಪ್ಪುಮಾಡುತ್ತದೆ ಎಂದು ಹೇಳುವುದು ಸರಿಯಾಗುವುದಿಲ್ಲ. ಇನ್ನೊಂದು ವಿಚಾರ ಸ್ಪೈನಕ್‌ರವರು ಹೇಳಿದರು. ಕೆಲವು ಕೋರ್ಟ್‌ಗಳಲ್ಲಿ ನ್ಯಾಯಾಧೀಶರು ಇಲ್ಲ ಎಂದು ಹೇಳಿದರು. ಆ ರೀತಿ 27–28 ಕೋರ್ಟುಗಳಲ್ಲಿ ಮುನ್‌ಸೀಫರು ಇಲ್ಲ. ಎರಡು ತಿಂಗಳ ಹಿಂದೆ ಹೈಕೋರ್ಟಿಗೆ ಬರೆದಿದ್ದೇವೆ. ಪಬ್ಲಿಕ್ ಸರ್ವಿಸ್ ಕಮಿಷನಿಂದ ನೇಮಕವಾಗುವುದು ಸ್ವಲ್ಪ ನಿಧಾನವಾಗುತ್ತದೆ. ಹಿಂದೆ ಮಾಡಿದಂಥ ಪರೀಕ್ಷೆಗಳಲ್ಲಿ ಕೇವಲ 8 ಜನ ಮಾತ್ರ ಪರೀಕ್ಷೆ ಗಳಲ್ಲಿ ಪಾಸ್ ಆಗಿದ್ದಾರೆ. ಹೆಚ್ಚು ಜನ ಪರೀಕ್ಷೆಗಳಲ್ಲಿ ಪಾಸ್ ಆಗಿಲ್ಲ. ಪುನಃ ಪರೀಕ್ಷೆ ಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ ಅವರನ್ನು ನೇಮಕ ಮಾಡಬೇಕು. ಆತುರ ಆತುರವಾಗಿ ಹೈಕೋರ್ಟಿಗೆ ಈ ಅಧಿಕಾರ ಕೊಡಬೇಕೇ ಎನ್ನುವ ವಿಚಾರ ಸರಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಹೆಚ್. ಸಿದ್ದವೀರಪ್ಪ.—ಎಷ್ಟು ಜನ ಪರೀಕ್ಷೆಗೆ ಕೂತಿದ್ದರು ?

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ಜನ ಕೂತಿದ್ದರು ಎಂದು ಅಂಕಿ ಅಂಶಗಳು ಇಲ್ಲ. ಇನ್ನೊಂದು ಸಾರಿ ಬೇಕಾದರೆ ಹೇಳುತ್ತೇನೆ.

ಇನ್ನು ಕೋರ್ಟು, ಕೋರ್ಟ್ ಬಿಲ್ಡಿಂಗ್ಸ್ ವಿಚಾರ.

Sri S. SIVAPPA.—Are these Courts closed ?

ಶ್ರೀ ಕೆ. ಪುಟ್ಟಸ್ವಾಮಿ.—Temporary arrangements ಮಾಡುತ್ತಾ ಇದ್ದೇವೆ. ಕೋರ್ಟಿಗೆ ನ್ಯಾಯಾಲಯಕ್ಕೆ ಉತ್ತಮವಾದ ಕಟ್ಟಡಗಳು ಇರಬೇಕಾದದ್ದು ಅತ್ಯಂತ ಅವಶ್ಯಕ. ಅಲ್ಲಿ ಬಂದಂಥ ಕಕ್ಷಿಗಾರರು, ಸಾರ್ವಜನಿಕರು ಮತ್ತು ವಕೀಲರು ಕುಳಿತುಕೊಳ್ಳುವುದಕ್ಕೆ ಮತ್ತು ಮೊಕದ್ದಮೆಗಳನ್ನು ನಡೆಸುವುದಕ್ಕೆ ಯೋಗ್ಯ ನ್ಯಾಯಾಲಯಗಳು ಇರಬೇಕು. ಮೈಸೂರು ರಾಜ್ಯದಲ್ಲಿ ಎಲ್ಲಾ ಕಡೆಯೂ ಕೂಡ ಯೋಗ್ಯ ಕಟ್ಟಡ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡು ತ್ತಿದ್ದೇವೆ. ಅನೇಕ ಕಡೆ ಒಳ್ಳೆಯ ಕಟ್ಟಡಗಳನ್ನು ಒದಗಿಸಿಕೊಟ್ಟಿದ್ದೇವೆ. ನಾನಾದರೂ ನಿರೀಕ್ಷಣೆ ಮಾಡುತ್ತೇನೆ, 10 ವರ್ಷಗಳ ಅವಧಿಯಲ್ಲಿ ಎಲ್ಲಾ ಕೋರ್ಟುಗಳಿಗೂ ಕೂಡ ಉತ್ತಮ ವಾದ ಕಟ್ಟಡವನ್ನು ಒದಗಿಸುವುದರಲ್ಲಿ ಸರಕಾರ ಯಶಸ್ವಿಯಾಗುತ್ತದೆ ಎಂದು.

Sri H. SIDDAVEERAPPA.—There may be a change in the judicial system itself because eminent jurists including the present Chief Justice are very much worried and they are considering as to how to speed up justice.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ನ್ಯಾಯಾಧೀಶರಿಗೆ ವಾಸಕ್ಕೆ ಯೋಗ್ಯವಾದ ಮನೆ ಗಳನ್ನು ಒದಗಿಸಬೇಕೆಂದು ಹೇಳಿದರು, ಅದು ಅತ್ಯಂತ ಅವಶ್ಯಕ. ನ್ಯಾಯಾಧೀಶರು ಸ್ಥಳೀಯ ಜನರ ಯಾರ ದಾಕ್ಷಿಣ್ಯಕ್ಕೂ ಒಳಗಾಗಬಾರದು, ಅವರಿಗೆ ಸರ್ಕಾರದವರು ವಸತಿಯನ್ನು ಒದಗಿಸಿ ದಿದ್ದರೆ ಯಾರ ಮನೆಯಲ್ಲಿ ಬಾಡಿಗೆಗೆ ಇರುತ್ತಾರೆಯೋ, ಅವರ ದಾಕ್ಷಿಣ್ಯಕ್ಕೆ ಪರೋಕ್ಷವಾಗಿ ಗುರಿ ಯಾಗತಕ್ಕ ಸಂದರ್ಭ ಬರಬಹುದು. ಆ ರೀತಿ ದಾಕ್ಷಿಣ್ಯಕ್ಕೆ ಒಳಗಾಗದೇ ಇದ್ದರೂ ಕೂಡ ಒಳಗಾಗಿ ದ್ದಾರೆ ಅಂತ ಆರೋಪಣೆ ಬರುವುದಕ್ಕೆ ಅವಕಾಶ ಇರುತ್ತದೆ. ಆ ಕಾರಣದಿಂದ ಯೋಗ್ಯವಾದ ವಸತಿ ಸೌಕರ್ಯ ಏರ್ಪಡಿಸುವಂತಹ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದೇವೆ, ಅದರ ರೀತ್ಯ ಈ ಸಾಲಿನಲ್ಲಿ ಸುಮಾರು 8–10 ಕಡೆ ಕಟ್ಟಡಗಳನ್ನು ಕಟ್ಟುವುದಕ್ಕೆ ಆಗಲೇ ಸರ್ಕಾರ ಮಂಜೂರು ಮಾಡಿದೆ.

5-30 P. M.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಚಾರ ಅನೇಕ ಮಾನ್ಯ ಸದಸ್ಯರು ಮಾತನಾಡಿದರು.

ಶ್ರೀ ಎಸ್ ಗೋಪಾಲಗೌಡ.—ಶಿವಮೊಗ್ಗ, ಕೊಪ್ಪ ತಾಲ್ಲೂಕುಗಳಲ್ಲಿ ನಾನು ಕೇಳಿದ ಪ್ರಕಾರ ಹಿಂದೆ ಭೂಸುಧಾರಣೆ ಬರುವುದಕ್ಕೆ ಮುಂಚೆ ಸ್ಪೆಷಲ್ ತಹಸೀಲ್ದಾರರು ಅಂತ ಅವರೇ ಕೇಸುಗಳನ್ನು ತೀರ್ಮಾನ ಮಾಡುತ್ತಾ ಇದ್ದರು. ನಾನು ಒಬ್ಬರ ಹತ್ತಿರ ಹೋಗಿದ್ದೆ, ಕಟ ಕಟೆ ಹಾಕಿಕೊಂಡು ಕುಳಿತಿದ್ದರು, ಕೆಳಗೆ ಬನ್ನಿ ಸಾರ್ ಮಾತನಾಡೋಣ ಅಂತ ಅಂದೆ, ಅವರು ಹೇಳಿದ್ದು

(ಶ್ರೀ ಎಸ್. ಗೋಪಾಲಗೌಡ)

ಏನು 90 ಕೇಸುಗಳು ಇವೆ, ಈ ಲಿಸ್ಟಿನಲ್ಲಿ. ವಕೀಲರೇ ಬರುವುದಿಲ್ಲ, ವಕೀಲರು ಬಂದರೆ ನಾನು ಇರುವುದಿಲ್ಲ, ನಾನು ಇದ್ದರೆ ರೈತ ಬರುವುದಿಲ್ಲ ಹೀಗಾಗಿ ಎರಡು ವರ್ಷದಿಂದ ಈ ಕೇಸುಗಳು ಹಾಗೆಯೇ ಇವೆ ಅಂತ ನನ್ನ ಹತ್ತಿರ ಅವರು ಒಪ್ಪಿಕೊಂಡರು. ಈ ತರಹ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ, ಕೊಪ್ಪದಲ್ಲಿ ಎಷ್ಟು ಕೇಸುಗಳು ಇವೆ ಎಂದು ಪ್ರಶ್ನೆ ಕೇಳಿದ್ದೆ, ಉತ್ತರ ಬಂದಿದೆಯೋ ಇಲ್ಲವೊ ಗೊತ್ತಿಲ್ಲ. ಇಷ್ಟು ಕೇಸುಗಳು ಇತ್ಯರ್ಥವಾಗದೇ ಹಾಗೆಯೇ ಬಿದ್ದು, ಓಡಾಡಿ ಓಡಾಡಿ ಹತ್ತು ಜೊತೆ ಮೆಟ್ಟು ಸವೆದು ಹೋಗಿರಬಹುದು. ನರಸಿಂಹರಾಜಪುರದಿಂದ ಕೊಪ್ಪಕ್ಕೆ ಕೋರ್ಟನ್ನು ತೆಗೆದುಕೊಂಡು ಹೋಗಿ ಹಾಕಬೇಕೆಂಬ ಅಭಿಪ್ರಾಯದಲ್ಲಿ ಇದ್ದೀರಿ. ಅದರ ಬಗ್ಗೆ ತೀರ್ಮಾನ ಆಖೈರಾಗಿದೆಯೋ, ಹಾಗೆಯೇ ಇದೆಯೋ ಗೊತ್ತಿಲ್ಲ. ಸ್ವಲ್ಪ ತಾಲ್ಲೂಕು ಮಟ್ಟದ ವಿಷಯ ಹೇಳಿ. ಹೈಕೋರ್ಟಿನ ವಿಷಯ ಹೇಳಿದಿರಿ, ಒಳ್ಳೆಯದು, ಅದರ ಬಗ್ಗೆ ನಮ್ಮದೇನೂ ಅಸಮಾಧಾನ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನರಸಿಂಹರಾಜಪುರದಿಂದ ಕೊಪ್ಪಕ್ಕೆ ತೆಗೆದುಕೊಂಡು ಹೋಗಿ ಹಾಕುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಹೈಕೋರ್ಟಿನವರು ಈ ವಿಚಾರ ಪರಿಶೀಲನೆ ಮಾಡಿ ಅವರು ಶಿಫಾರಸು ಮಾಡಬೇಕಾಗುತ್ತದೆ. ಇದು ಹೈಕೋರ್ಟಿನ ಮುಂದೆ ಇದೆಯೋ ಏನೋ ಗೊತ್ತಿಲ್ಲ. ಈಗ ಹೇಳುವುದಾದರೆ ಸದ್ಯದಲ್ಲಿ ಇದು ನನ್ನ ಗಮನಕ್ಕೆ ಬಂದಿಲ್ಲ. ತೀರ್ಥಹಳ್ಳಿಯಲ್ಲಿ ಯಾವುದೋ 90 ಕೇಸುಗಳ ವಿಷಯ ಹೇಳಿ, ತಹಸೀಲ್ದಾರರು ಒಬ್ಬರು ಬಂದರೆ ಒಬ್ಬರು ಬರುವುದಿಲ್ಲ ಅಂತ ಹೇಳಿದರು ಎಂದು ಹೇಳಿದರು. ಅವರು ಯಾವ ರೀತಿ ಕಾರ್ಯ ಮಾಡುತ್ತಾರೆಯೋ ಹೇಳಲಾರೆ, ಅನೇಕ ಸಾರಿ ಕುಣಿಯಲಾರದವಳಿಗೆ ನೆಲ ಡೊಂಕು ಅಂತ ಅನ್ನುವ ಹಾಗೆ ಕೆಲವರು ಕಾರ್ಯ ಮಾಡುತ್ತಾರೆ. ಆದ್ದರಿಂದ ಆ ವಿಚಾರದಲ್ಲಿ ಅಭಿಪ್ರಾಯ ಹೇಳುವುದಕ್ಕಾಗುವುದಿಲ್ಲ.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಅನೇಕ ಸದಸ್ಯರು ಟೀಕೆ ಮಾಡಿದ್ದಾರೆ. ಅಲ್ಲಿಗೆ ಬಂದಂತಹ ಅಭ್ಯರ್ಥಿಗಳೆಲ್ಲರಿಗೂ ಕೆಲಸ ಕೊಡಿಸತಕ್ಕ ಸಂಸ್ಥೆ ಅದು ಅಲ್ಲ. ಕೆಲಸ ಎಲ್ಲೇ ಖಾಲಿ ಬಿದ್ದರೂ ಖಾಲಿ ಬಿದ್ದಿರತಕ್ಕ ಜಾಗವನ್ನು ಭರ್ತಿ ಮಾಡುವುದಕ್ಕಿಂತ ಮುಂಚೆ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೆ ಅವರು ತಿಳಿಸಬೇಕು.

ಶ್ರೀ ಎಸ್. ಗೋಪಾಲಗೌಡ.—ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ್ನು ರದ್ದು ಮಾಡಿ ಪೋಸ್ಟ್ ಆಫೀಸಿನಲ್ಲಿ ಹೆಸರನ್ನು ನಮೂದು ಮಾಡಿ ಅಂತ ಏಕೆ ಹೇಳಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಎಕ್ಸ್‌ಚೇಂಜ್‌ನಲ್ಲಿ ಅಭ್ಯರ್ಥಿಗಳ ಹೆಸರನ್ನು ರಿಜಿಸ್ಟರ್ ಮಾಡಿಸಬೇಕು, ಅವರ ಹತ್ತಿರ ಪಟ್ಟಿ ಇರುತ್ತದೆ. ಒಂದೊಂದು ಹುದ್ದೆಗೆ 5-6-7 ಜನರ ಹೆಸರನ್ನು ಅವರು ಕಳುಹಿಸುತ್ತಾರೆ, ಯಾರನ್ನು ನೇಮಕ ಮಾಡಿಕೊಳ್ಳಬೇಕು ಎನ್ನುವಾಗ ಅವರನ್ನು ಇಂಟರ್‌ವ್ಯೂ ಮಾಡಿ ಅವರಲ್ಲಿ ಯೋಗ್ಯರಾದವರನ್ನು ಸಂಬಂಧಪಟ್ಟ ಇಲಾಖೆಯವರು ನೇಮಕ ಮಾಡಿಕೊಳ್ಳುತ್ತಾರೆ. ಹಿಂದೆ ಪ್ರಶ್ನೋತ್ತರಗಳ ಕಾಲದಲ್ಲಿ ಅಂಕಿ ಅಂಶಗಳನ್ನು ಒದಗಿಸಿದ್ದೇನೆ. ಈ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳತಕ್ಕವರಲ್ಲಿ 8 ಪರ್ಸೆಂಟ್ ಜನರಿಗೆ ಕೆಲಸ ಸಿಕ್ಕುತ್ತಾ ಇದೆ. ಬಾಕಿಯವರಿಗೆ ಕೆಲಸ ದೊರಕುತ್ತಾ ಇಲ್ಲ ಕಾರಣ ಉದ್ಯೋಗಾವಕಾಶಗಳು ಬಹಳ ಕಡಿಮೆ ಇವೆ.

Sri S. SIVAPPA.—Now that Government has stopped taking local candidates, what useful purpose will be served by registering their names in the Employment Exchange ?

Sri K. PUTTASWAMY;—Government is not the only institution which gives employment ; there are several other institutions.

ಶ್ರೀ ಎಸ್. ಗೋಪಾಲಗೌಡ.—ಮೈಸೂರು ರಾಜ್ಯದ ಕೈಗಾರಿಕೆಗಳಲ್ಲಿ ಕೆಲಸ ಪಡೆಯಬೇಕಾದರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ವ್ಯವಸ್ಥೆ ಮಾಡಲಾಗುತ್ತದೆಯೇ ? ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಕೊಟ್ಟ ಪಟ್ಟಿಯಿಂದ ಪಿಕ್ ಅಂಡ್ ಚೂಸ್ ಮಾಡಿ ತೆಗೆದುಕೊಳ್ಳಲು ಅಧಿಕಾರ ಕೊಟ್ಟಿದೆಯೇ ? ಕೆಲವು ಸಂದರ್ಭಗಳಲ್ಲಿ ಖಾಲಿ ಬಿದ್ದಾಗ ಕೈಗಾರಿಕೆಗಳವರು ಅಡ್ವರ್‌ಟೈಸ್ ಮಾಡುವುದೇ ಇಲ್ಲ.

Sri K. PUTTASWAMY.—The hon. Member is going into the question of appointment.

ಇದು ಅಪಾಯಿಂಟ್‌ಮೆಂಟ್ ಪಾಲಿಸಿ ವಿಷಯ ಆಯಿತು. ಪಬ್ಲಿಕ್ ಸರ್ವೀಸ್ ಕಮಿಷನ್ ರವರು ಲಿಸ್ಟ್ ಕಳುಹಿಸುತ್ತಾರೆ, ಅವರು ಯಾವ ಆರ್ಡರ್‌ನಲ್ಲಿ ಕಳುಹಿಸುತ್ತಾರೆ ಅದೇ ರೀತಿ ಮಾಡಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಹೋದ ಸಲ ಸ್ಥಳೀಯ ಅಭ್ಯರ್ಥಿಗಳು ಸಾವಿರಾರು ಜನರು ಏನಿದ್ದರು, ಅವರನ್ನು ರೆಗ್ಯುಲರೈಸ್ ಮಾಡಿದಮೇಲೆ ಪುನಃ 5 ಸಾವಿರ ಜನರನ್ನು ಯಾರು ಅಪಾಯಿಂಟ್ ಮಾಡಿದವರು ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕವಾಗಿಯೇ ಆಗಿರುವುದು.

Sri M. S. KRISHNAN.—You have got a good policy of selecting people through the Employment Exchanges in all the State and public sector industries. But what are you doing in respect of those State and public sector industries which are not appointing through the Employment Exchange but on their own ?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ಸ್ಟೇಟ್ ಅಂಡರ್ ಟೇಕಿಂಗ್ಸ್‌ನಲ್ಲಿ ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಅವರ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತಾ ಇಲ್ಲ. ಅವರೇ ಬೇರೆ ಜಾಹೀರಾತುಗಳನ್ನು ಕೊಟ್ಟು ನೇಮಕ ಮಾಡಿಕೊಳ್ಳುತ್ತಾ ಇದ್ದಾರೆ, ಅವರು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಅವರಿಗೆ ಒತ್ತಾಯ ಮಾಡುತ್ತಾ ಇದ್ದೇವೆ.

ಬಿದರ್ ಜಿಲ್ಲೆಯ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸರ್ ವಿಚಾರ ಶ್ರೀಮಾನ್ ಸ್ಟೈನಕ್ ರವರು ಹೇಳಿದರು ಅಂತ ಕಾಣುತ್ತದೆ. ಇದಕ್ಕೆ ಒಂದು ಹಿನ್ನಲೆ ಇದೆ, ಅದರ ಮೇಲೆ ಯಾವ ವಿಧವಾದ ವ್ಯಾಖ್ಯಾನವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿರತಕ್ಕ ವಿಚಾರವನ್ನೇ ಓದಿದರೆ ಅವರಿಗೆ ಸ್ಪಷ್ಟವಾಗುತ್ತದೆ. ಶ್ರೀಮಾನ್ ಚಂದ್ರಕಾಂತ್‌ರವರು ಒಂದು ಕಾಗದ ಬರೆದು ನನಗೆ ಒಂದು ಕಾಪಿ ಕಳುಹಿಸಿದ್ದಾರೆ, ಇದರಲ್ಲಿ ಹೀಗೆ ಇದೆ :

> "Complaint against District Employment officer, Bidar : The following is a complaint against a District Employment Officer based upon the representations made to me by several unemployed youths of this place and it is further transmitted to you hoping that you would do the needful in the matter."

I just want to request the House to note the expression 'based upon the representations made to me by several unemployed youths'.

> " Some time back, this man was working here only at Bidar in the same office as F.D.C. and after some time of short duration is posted back at Bidar as the Officer-in-charge of Employment Exchange, District Bidar. When he was working as F.D.C. he has been removed on the grounds of corruption, complaints against him being genuine. And even now, he is continuing with his same old habits.
>
> " He is bestowed with all the vices like drinking, debauchery and gambling. It is usual feature of him that no card is given to any unemployed unless he receives Rs. 50. He receives this illegal gratification through his peon at his residence. You will be surprised that this man extracts money even from the unemployed.

(ಶ್ರೀ ಕೆ. ಪುಟ್ಟಸ್ವಾಮಿ)

"Under the guise of tour, he goes to his village near Gulbarga and attends to his agricultural work. This is an open fact and after coming back claims T.A. and D.A. There are numerous unemployed in the register on the roll for the last 3 years without receiving even a single call card and the illegal gratification does everything wonderful overnight and card is given to him next day morning in the Office. These things will definitely come to light if enquiry is held against him by transferring him forthwith or keeping him under suspension even.

"Thanking you."

Sri G. CHANDRAKANTH.—I have made this complaint. The complaints made therein are genuine. I wish to know whether an enquiry was held into the matter. If the Hon. Minister is prepared to hold an enquiry, I am prepared to prove the allegations made by me.

Sri K. PUTTASWAMY.—The matter has been enquired into and the Director of Employment and Training has sent a reply to the hon. Member; I think he must have received it. The letter to the hon. Member reads as follows:

"I have looked into your complaint. Sri Patil was previously working in Bidar as a Junior Statistical Officer during the period from 19-6-1964 to 19-4-1966. He has been posted back to the same place as an in-charge District Employment Officer only after expiry of over three years. It is not therefore correct to say that he was outside Bidar only for a very short while.

"I have closely scrutinised the diaries and tour programmes of this officer for the last six months. I do not find that he ever proceeded unauthorisedly beyond his jurisdiction. He has done legitimate duties while on tour. If you can kindly give me the particulars of his visits to any place on personal work only, I shall certainly arrange further investigation of the matter.

"The other allegations are also too general. If specific instances are pointed out, I shall cause enquiries into the same and take further necessary action.

"Sri Patil has been in Bidar for less than 8 months now and it will not be in public interest to transfer him from there so soon. It will also not be possible to place him under suspension unless of course a prima facie case is made out against him after holding preliminary enquiries in respect of specific charges."

(*Interruption*)

I am not yielding because my time is fast running out. I have not completed my say in this matter.

The complaint disclosed that the allegations are too general. If the hon. Member or any aggrieved person is prepared to give in writing concrete instances, I can give an assurance of holding an enquiry and taking necessary action.

What I wanted to bring to the notice of this House was that the hon. Member has made this allegation based on the information that he has obtained from the unemployed youths who went there to get their names registered ; and they are too general in nature. If there are any specific allegations, I can give an assurance that necessary enquiry will be made and action will be taken against this Officer. I do not want to say anything more on this matter.

ಇನ್ನು ಬಹಳ ಮುಖ್ಯವಾದ ವಿಚಾರ ಮಾನ್ಯ ಸ್ನೇಹಿತರಾದ ಕೃಷ್ಣನ್ ರವರು ಪ್ರಸ್ತಾಪ ಮಾಡಿರುವುದು. ನೀವು ಲಾಯಖ್ ಆಗಿದ್ದೀರಿ ಎಂದು ಅವರು ಹೇಳಿದ್ದಾರೆ ನನಗೆ ಬಹಳ ಕಷ್ಟ ವಾಗುತ್ತಿತ್ತು, ಲೇಬರ್ ಇಲಾಖೆಯು ಆಡಳಿತ ನಡೆಸುವುದಕ್ಕೆ ನಾನು ನಾಲಾಯಖ್ ಎಂದು ಹೇಳಿರುವುದು ನನಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ. ತೃಪ್ತಿಕರವಾಗಿ, ಸಮರ್ಪಕವಾಗಿ ಕೆಲಸ ಮಾಡುತ್ತಿದ್ದೇನೆ ಎಂಬುದೇ ನನಗಿರುವ ಸಮಾಧಾನ. ಮಾನ್ಯ ಸದಸ್ಯರು ಹೇಳಿರುವ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಬಿ ಇ. ಎಂ. ನಲ್ಲಿ ಕೆಲವು ಮೈನಾರಿಟಿ ಅಸೋಸಿಯೇಷನ್‌ಗಳನ್ನು ನಾನು ಪೋಷಣೆ ಮಾಡುತ್ತೇನೆ, ಮೆಜಾರಿಟಿ ಅಸೋಸಿಯೇಷನ್ಸ್‌ಗಳಿಗೆ ವಿರೋಧವಾಗಿದ್ದೇನೆ ಎಂದು ಹೇಳಿದರು. ಎಚ್. ಎಂ. ಟಿ., ಎಂ. ಇ. ಐ. ಮತ್ತು ಬಿ. ಇ. ಎಲ್. ವಿಚಾರ ಹೇಳಿದರು. ಈಗ ಬಿ.ಇ.ಎಲ್. ವಿಚಾರ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಮೆಜಾರಿಟಿ ಯೂನಿಯನ್ ರೆಕಗ್ನೈಜ್ ಮಾಡಲು ನಿಧಾನ ಮಾಡುತ್ತಿದ್ದಾರೆ ಎಂದು ಹೇಳಿದರು.

According to the procedure laid down a registered notice was issued to all the registered Unions to produce their memberships records, etc., for verification. Since there was no response from the Unions, a second registered notice was issued after a lapse of ten days as required under the Rules of Procedure. The records were not produced by any Union during the period stipulated in the notice. Since all Unions failed to produce the necessary records, verification was dropped and the parties also endorsed accordingly. Under the procedur laid down, there is no provision to issue another notice after the second registered notice and hence verification has to be dropped.

ಮಾನ್ಯ ಸದಸ್ಯರು ಎಚ್.ಎಂ.ಟಿ. ವಿಚಾರದಲ್ಲಿ ಹೇಳಿದರು. ಎಚ್.ಎಂ.ಟಿ. ವಿಚಾರದಲ್ಲಿ ವೆರಿಫಿಕೇಷನ್ ರಿಪೋರ್ಟ್ ಬರುವುದಿದೆ, ಇಂಪ್ಲಿಮೆಂಟೇಷನ್ ಕಮಿಟಿ ಮುಂದೆ ಬರುತ್ತದೆ, ಅದು ತೀರ್ಮಾನವಾಗುತ್ತದೆ.

ಎಂ.ಇ.ಐ. ವಿಚಾರ ಹೇಳಿದರು. ಡಿಸೆಂಬರ್ ತಿಂಗಳಲ್ಲಿ ಹೇಳಿದರು, ಜಾಗ್ರತೆ ತೀರ್ಮಾನ ಮಾಡ ಬೇಕು, ಕಮಿಟಿ ಮುಂದೆ ಇದೆ, ಅದನ್ನು ಮುಂದಕ್ಕೆ ಹಾಕಿದ್ದಾರೆ ಎಂದು. ಅವರ ಅಪೇಕ್ಷೆಯಂತೆ ನಾನು 31ನೇ ಡಿಸೆಂಬರ್‌ನಲ್ಲಿ ಮೀಟಿಂಗ್ ಕರೆದೆ. ಮೀಟಿಂಗ್ ಕರೆಯುವಷ್ಟರಲ್ಲಿ ಒಂದು ಕಾಗದ ಬಂತು. ಅವರ ಪ್ರತಿನಿಧಿ ಸದಸ್ಯರಿಂದ, ಸಬ್‌ಜೆಕ್ಟ್ ಹಿಂದಕ್ಕೆ ತೆಗೆದುಕೊಂಡಿದ್ದೇವೆ ಎಂದು. ನಾನು ಹೇಳಿದೆ, ಸಬ್‌ಜೆಕ್ಟ್ ವಾಪಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದರ ಮೇಲೆ ತೀರ್ಮಾನವಾಗ ಬೇಕು ಎಂದು. ಮೀಟಿಂಗ್‌ಗೆ ಅದೇ ಸದಸ್ಯರು ಹಾಜರಾಗಿ ಹೇಳಿದರು, ಈ ಹೊತ್ತು ತೀರ್ಮಾನ ಮಾಡುವುದು ಬೇಡ, ಮತ್ತೊಂದು ವಿಚಾರ ಇದಕ್ಕೆ ಸಂಬಂಧಪಟ್ಟದ್ದು ಇದೆ, ಮುಂದಕ್ಕೆ ಹಾಕಿ ಎಂದು. ಅವರ ಪ್ರತಿನಿಧಿಯ ಅಪೇಕ್ಷೆಯಂತೆ ಮುಂದಕ್ಕೆ ಹಾಕಿದೆ. ಮಾನ್ಯ ಸದಸ್ಯರಾದ

(ಶ್ರೀ ಕೆ. ಪುಟ್ಟಸ್ವಾಮಿ)

ಅವಲೋರ್ಕನಂ ಅವರು ಒಂದು ವಿಚಾರ ಸೂಚ್ಯವಾಗಿ ಹೇಳಿದರು. ಮಾನ್ಯ ಸದಸ್ಯರಿಗೆ ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇದೆಯೇ ಎಂದು ಪ್ರಶ್ನೆ ಮಾಡಿದರು. ನನ್ನ ಹಾಗೆಯೇ ಚುನಾವಣೆಯಾಗಿ ಅವರೂ ಬಂದಿದ್ದಾರೆ. ಅದನ್ನು ಪ್ರಶ್ನೆ ಮಾಡುವುದಕ್ಕೆ ನಾನು ಅಪೇಕ್ಷೆಪಡುವುದಿಲ್ಲ.

ಟ್ರೇಡ್ ಯೂನಿಯನ್‌ಗಳನ್ನು ರೆಕಗ್ನೈಸ್ ಮಾಡಬೇಕಾದರೆ ಯಾವ ಯಾವ ಕ್ರಮವಿದೆಯೋ ಆ ಕ್ರಮ ಯಾವುದನ್ನೂ ಕೂಡ ಮಾನ್ಯ ಸದಸ್ಯರು ಅನುಸರಿಸುವುದಿಲ್ಲ ಅವರಿಗೆ ಒಂದೇ ಗೊತ್ತು, ಅವರಿಗೆ ನಂಬಿಕೆ ಇರುವುದು ದೊಣ್ಣೆಯಲ್ಲಿ. ಇಲ್ಲೀಗಲ್ ಸ್ಟ್ರೈಕ್ ಮಾಡಿಸುವುದು, ಜನರನ್ನು ಬೆದರಿಸುವುದು, ಮತ್ತೆ ಕಾರ್ಮಿಕರಿಗೆ ಹೊಡೆಸುವುದು, ಅಲ್ಲಿಂದ ಬಂದು ಇಲ್ಲಿ ರೆಕಗ್ನಿಷನ್ ಕೊಡ ಬೇಕು ಎಂದು ಕೇಳುವುದು.

ಎಂ.ಇ.ಐ. ನಲ್ಲಿ ಎರಡು ತಿಂಗಳವರೆಗೆ ಸ್ಟ್ರೈಕ್ ಮಾಡಿಸಿದರು, ಇಲ್ಲೀಗಲ್ ಸ್ಟ್ರೈಕ್ ಮಾಡಿಸಿ ದರು. ಆ ನಂತರ ಇಂಪ್ಲಿಮೆಂಟೇಷನ್ ಕಮಿಟಿ ಮುಂದೆ ಬಂದು ರೆಕಗ್ನೈಸ್ ಮಾಡಿ ಎಂದು ಹೇಳು ತ್ತಾರೆ. ಕಾನೂನು ಬಾಹಿರವಾದ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಶ್ರೀ ಎಂ. ಎಸ್. ಕೃಷ್ಣನ್ ಅವರು ಲೇಬರ್ ಅಸೋಸಿಯೇಷನ್ ಸದಸ್ಯರಾಗಿ ಎಲ್ಲಿದ್ದಾರೆ, ಯಾವ ಯಾವ ಲೇಬರ್ ಅಸೋಸಿ ಯೇಷನ್‌ಗಳು ಇವರ ಮಾರ್ಗದರ್ಶನದಲ್ಲಿ ನಡೆಯುತ್ತಿವೆ, ಅಲ್ಲಿ ಎಲ್ಲಿಯೂ ಕೂಡ ಮಾಡುವುದು ಕಾನೂನು ಬಾಹಿರವಾದ ಕ್ರಮ. ಮೈನಾರಿಟಿ ಅಸೋಸಿಯೇಷನ್ ತೆಗೆದುಕೊಂಡು ಬಂದು ಅದೇ ಮೇಜರ್ ಅಸೋಸಿಯೇಷನ್ ಅದನ್ನು ರೆಕಗ್ನೈಸ್ ಮಾಡಬೇಕು ಎಂದು ಹೇಳುವುದು ಇದು ಅವರ ವೃತ್ತಿಯಾಗಿದೆ.

ಎಚ್.ಎಂ.ಟಿ. ಅಸೋಸಿಯೇಷನ್ ವಿಚಾರ ಹೇಳುತ್ತೇನೆ. ಎಚ್.ಎಂ.ಟಿ. ಯಲ್ಲಿ ಕಾರ್ಮಿಕ ಸಂಘ ರೆಕಗ್ನೈಸ್ಡ್ ಯೂನಿಯನ್. ಎಚ್.ಎಂ.ಟಿ. ಎಂಪ್ಲಾಯೀಸ್ ಅಸೋಸಿಯೇಷನ್, ಇವರ ಮಾರ್ಗದರ್ಶನದಲ್ಲಿ ನಡೆಯುತ್ತಿರತಕ್ಕದ್ದು ಅನ್‌ರೆಕಗ್ನೈಸ್ಡ್ ಯೂನಿಯನ್. ಎಚ್.ಎಂ.ಟಿ. ಮ್ಯಾನೇಜ್‌ಮೆಂಟಿನವರು ಎಚ್.ಎಂ.ಟಿ. ಕಾರ್ಮಿಕ ಸಂಘದ ಜೊತೆಯಲ್ಲಿ ಒಪ್ಪಿಗೆ.........

ಶ್ರೀ ಎಂ. ನಾಗಪ್ಪ.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ ....

ಶ್ರೀ ಎಚ್. ಸಿದ್ದವೀರಪ್ಪ.—ಮಳೆ ಬಂದು ನಿಂತ ಹಾಗಾಯಿತು.

Sri M. NAGAPPA.—While replying to the allegations made by Sri M. S. Krishnan the Minister stated that it has become 'his business'. It is an insinuation against a member and as per rule 288 a member should not use such language which is offensive. So, I submit it is not his habit or his business. I request that that word may be expunged from the records.

Mr. SPEAKER.—As the hon. member Sri Siddaveerappa said everything was just as raining. I did not hear. If I find anything like that I shall examine and take necessary step.

Sri M. S. KRISHNAN.—On a point of order.........

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಉಗ್ರವಾದ ಟೀಕೆ ಮಾಡುವಾಗ ಬಹಳ ಸಾವಧಾನದಿಂದ ಕೇಳಿದೆ. ನಾನು ಒಂದು ಮಾತೂ ಹೇಳಲಿಲ್ಲ. ಈಗ ನಾನು ಟೀಕೆಗಳಿಗೆ ಉತ್ತರ ಕೊಡುವಾಗ ಪಾಯಿಂಟ್ ಆಫ್ ಆರ್ಡರ್ ಮೂಲಕ ನಿಲ್ಲಿಸಬೇಕು ಎಂದರೆ ನಿಲ್ಲಿಸಿಕೊಳ್ಳಲಿ, ಬೇಡ ಎನ್ನುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟು. ಮಾನ್ಯ ಮಂತ್ರಿಗಳಿಗೆ ನಾವು ಹೇಗೆ ಕಟುವಾಗಿ ಟೀಕೆ ಮಾಡಿದ್ದೇವೋ ಹಾಗೆಯೇ ಕಟುವಾಗಿ ಟೀಕಿಸುವ ಹಕ್ಕಿಲ್ಲ ಎಂದು ನಾನು ಹೇಳುವುದಿಲ್ಲ. ಆ ಹಕ್ಕನ್ನು ಉಳಿಸಿಕೊಳ್ಳಲಿ. ಆದರೆ ಹೇಳುವ ರೀತಿಯಲ್ಲಿ ಸರಿಯಾಗಿ ಹೇಳಬೇಕು ಎಂದು ಮಾತ್ರ ಹೇಳಬಲ್ಲೆ. ಮಂತ್ರಿಗಳು ಅತಿ ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ಅವರು ಏನು ಹೇಳಿದರು ಎಂದರೆ, ಈ ಮನುಷ್ಯನ ಕೆಲಸ ಏನು ಎಂದರೆ, ದೊಣ್ಣೆ ತೆಗೆದುಕೊಂಡು ಹೊಡೆಸುವುದು, ಹೊಡೆಯುವುದು ಇದೇ ಕಸಬು ಎನ್ನುವಂಥ ರೀತಿಯಲ್ಲಿ ಹೇಳಿದರು. ಇದೇ ಅವರ ವೃತ್ತಿ ಎಂದು ಹೇಳಿದರು. ಇದು ನಿಜವಾಗಿ ನನ್ನ ಘನತೆ ಗೌರವಗಳಿಗೆ ಚ್ಯುತಿ ತರತಕ್ಕ ವಿಷಯ.

ನಾನು ಅವರಿಗೆ ಒಂದು ಸವಾಲು ಹಾಕುತ್ತೇನೆ. ಏನೆಂದರೆ ಬೆಂಗಳೂರು ನಗರದಲ್ಲಿ ಆಗಲಿ, ಮೈಸೂರಿನಲ್ಲಿ ಆಗಲಿ, ಯಾವುದೇ ಸ್ಥಳದಲ್ಲಿ ಆಗಲೀ,—ಅವರು ಕೃಷ್ಣ ರಾಜೇಂದ್ರ ಮಿಲ್ ಅಸೋಸಿಯೇಷನ್ ಅಧ್ಯಕ್ಷರಾಗಿದ್ದರು—ಅಲ್ಲಿಗೆ ನಾನೂ ಹೋಗುತ್ತೇನೆ, ಅವರೂ ಹೋಗಲಿ. ಕಾರ್ಮಿಕರು ಅವರಿಗೆ ಬೆಂಬಲ ಕೊಟ್ಟರೆ ನಾನು ರಾಜೀನಾಮೆ ಕೊಡುತ್ತೇನೆ, ನನಗೆ ಬೆಂಬಲ ಕೊಟ್ಟರೆ ಮಂತ್ರಿಗಳು ರಾಜೀನಾಮೆ ಕೊಡುತ್ತಾರೆಯೇ ?

Mr. SPEAKER.—There is no point of order.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಒಂದು ಕಾರಣಕಕ್ಕಾಗಿ ಮಾನ್ಯ ಸದಸ್ಯರ ಸವಾಲನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ, ಸ್ವಾಮಿ. ಈ ಸಭೆಯಲ್ಲಿ ಇದುವರೆಗೆ ಎಲ್ಲ ಖಾಲಿ ಕುರ್ಚಿಗಳಿದ್ದುವು. 5-30 ಗಂಟೆ ಮೇಲೆ ಒಬ್ಬೊಬ್ಬರಾಗಿ ಬಂದು ಕುಳಿತುಕೊಂಡರು. ಆದ್ದರಿಂದ ದಯಮಾಡಿ ಇನ್ನು ಮೇಲೆ ಐದೂವರೆ ಗಂಟೆಗೆ ಅಸೆಂಬ್ಲಿ ಸೇರುವ ಹಾಗೆ ಮಾಡಿ.

Mr. SPEAKER.—It is the problem for the leaders of the parties in the House.

ಶ್ರೀ ಕೆ. ಪುಟ್ಟಸ್ವಾಮಿ.—ಎಚ್.ಎಂ.ಟಿ. ಆಯಿತು, ಎಮ್.ಇ.ಐ. ಆಯಿತು. ಶ್ರೀ ಕೃಷ್ಣನ್ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿರತಕ್ಕ ಯೂನಿಯನ್‌ಗಳು ಮೈನಾರಿಟಿ ಯೂನಿಯನ್‌ಗಳು. ಮೆಜಾರಿಟಿ ಯೂನಿಯನ್‌ಗಳು ಅಗ್ರಿಮೆಂಟ್ ಮಾಡಿಕೊಳ್ಳಬೇಕು ಎಂದು ಪ್ರಯತ್ನ ಪಟ್ಟರೆ, ಅದನ್ನು ತಪ್ಪಿಸುವುದಕ್ಕೆ ಇಲ್ಲೀಗಲ್ ಸ್ಟ್ರೈಕ್ ಮಾಡಿಸುತ್ತಾರೆ, ಪ್ರಚಾರಗಳು ನಡೆಯುತ್ತವೆ, ಪ್ರದರ್ಶನಗಳು ನಡೆಯುತ್ತವೆ. ಈ ರೀತಿಯಲ್ಲಿ ಮಾನ್ಯ ಸದಸ್ಯರು ಯಾವ ಯೂನಿಯನ್‌ಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ, ಅವು ಮೈನಾರಿಟಿ ಯೂನಿಯನ್‌ಗಳು. ಅದಕ್ಕೆ ನೇರವಾಗಿ ಸರ್ಕಾರಕ್ಕೆ ಬಂದು ಪರೋಕ್ಷವಾಗಿ ಬೆಂಬಲ ಕೊಡಬೇಕು ಎಂದು ಹೇಳುತ್ತಾರೆ. ಕೊಡಲಿಲ್ಲವೆಂದರೆ ನಮ್ಮದು ಮೆಜಾರಿಟಿ ಯೂನಿಯನ್, ಮೆಜಾರಿಟಿ ಯೂನಿಯನ್ನಿಗೆ ಬೆಂಬಲ ಕೊಡುವುದಿಲ್ಲ ಎಂದು ಹೇಳುತ್ತಾರೆ. ರೆಕಗ್ನಿಷನ್ ಪ್ರಶ್ನೆ ಬರುವಂಥ ವೇಳೆಯಲ್ಲಿ, ಅನೇಕ ಇಲ್ಲೀಗಲ್ ಸ್ಟ್ರೈಕ್ ಮತ್ತು ಅನೇಕ ಅಪರಾಧಗಳನ್ನು ಮಾಡಿದಂಥ ಯೂನಿಯನ್‌ಗಳು ರೆಕಗ್ನಿಷನ್ನಿಗೆ ಬರುತ್ತವೆ. ಕೋಡ್ ಆಫ್ ಡಿಸಿಪ್ಲಿನ್ ಪ್ರಕಾರ ಯಾವ ಯೂನಿಯನ್‌ಗಳು ಕೆಲಸ ಮಾಡಿರುತ್ತವೆ, ಯಾವುವು ಒಂದು ವರ್ಷದ ಅವಧಿಯಲ್ಲಿ ಯಾವ ಯಾವ ವಿಧವಾದ ಅಪಾದನೆಗೂ ಒಳಗಾಗದೆ ಇರುತ್ತವೆ, ಅಂಥ ಅಸೋಸಿಯೇಷನ್ನಿಗೆ ಮಾತ್ರ ರೆಕಗ್ನಿಷನ್ ಸಿಕ್ಕುತ್ತದೆ, ಬಾಕಿ ಅಸೋಸಿಯೇಷನ್ನುಗಳಿಗೆ ರೆಕಗ್ನಿಷನ್ ಸಿಕ್ಕುವುದಿಲ್ಲ.

ಇನ್ನೊಂದು ವಿಚಾರ. ಕೃಷ್ಣರಾಜೇಂದ್ರ ಮಿಲ್ಲಿನಲ್ಲಿ ಅದಂಥ ಒಂದು ಅಗ್ರಿಮೆಂಟ್ ವಿಚಾರದಲ್ಲಿ ಕೋರ್ಟಿನ ಹೊರಗಡೆ ತೀರ್ಮಾನ ಮಾಡಿಕೊಳ್ಳುವಂಥ ಪ್ರಯತ್ನಗಳು ನಡೆಯುತ್ತಿವೆ ಎನ್ನುವ ವಿಚಾರ ನನಗೆ ತಿಳಿದು ಬಂದಿದೆ. ನನಗೆ ತಿಳಿದಿರುವ ಪ್ರಕಾರ ಕೋರ್ಟಿನ ಮುಂದೆ ಒಂದು ಮೊಕದ್ದಮೆ ಹೋದಮೇಲೆ ಕೋರ್ಟಿನವರು ಯಾವ ರೀತಿ ತೀರ್ಮಾನ ಮಾಡುತ್ತಾರೆ, ಅದರಂತೆ ಮ್ಯಾನೇಜ್‌ಮೆಂಟಿನವರು ಮತ್ತು ಕಾರ್ಮಿಕರು ನಡೆದುಕೊಳ್ಳಬೇಕಾಗಿದೆ.

ಈ ಚರ್ಚೆಯ ಸಮಯದಲ್ಲಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಮಾಲೀಕರ ಪರವಾಗಿ ಸರ್ಕಾರ ವರ್ತನೆ ಮಾಡುತ್ತಿದೆ ಎಂದು, ಅದು ಶುದ್ಧಾಂಗವಾಗಿ ತಪ್ಪು, ಅದಕ್ಕೆ ಯಾವ ವಿಧವಾದ ರುಜುವಾತನ್ನೂ ಇಟ್ಟಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The question is :

"That respective sums not exceeding the sums mentioned in Demand Nos. 9, 11 and 26 be granted to the Government to defray the charges which will come in course of payment during the financial year ending with 31st March 1971."

The motion was adopted.

(MR. SPEAKER)

(As directed by the Chair, the motion for Demands for Grants adopted by the Chair are reproduced below)

DEMAND NO. 9.—STATE LEGISLATURE AND ELECTIONS

18. Parliament, State/Union Territory Legislature

"That a sum not exceeding Rs. 46,35,000 be granted to the Government to defray the charges which will come in course of payment during the financial year for the period ending 31st day of March 1971 in respect of 'Parliament, State/Union Territory Legislature'."

DEMAND NO. 11.—ADMINISTRATION OF JUSTICE.

21. Administration of Justice.

"That a sum not execeeding Rs. 1,82,65,000 be granted to the Government to defray the charges which will come in course of payment during the financial year for the period ending 31st day of March 1971, in respect of 'Administration of Justice.'"

DEMAND NO. 26.—LABOUR AND EMPLOYMENT

38. Labour and Employment

"That a sum not exceeding Rs. 1,27,67,000 be granted to Government to defray the charges which will come in course of payment during the financial year for the period ending 31st day of March 1971, in respect of 'Labour and Employment'."

Mr. SPEAKER.—For tomorrow there will be two sittings. One in the morning from 8-30 a.m. and another in the afternoon.

Sri H. SIDDAVEERAPPA.—Sir, when shall I have the opportunity of speaking, in the morning or in the afternoon?

Mr. SPEAKER.—It is convenient to have it in the afternoon. The House will now rise and meet tomorrow at 8-30 a.m.

The House adjourned at Six of the Clock to meet again at Thirty Minutes past Eight of the Clock on Wednesday, 25th March 1970.

WD 14752—GPB—550—11-8-1970